# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಜನಶ್ರೀವಾಣಿ

ಈಶನ ಆರಾಧನೆಯಷ್ಟೇ
ದೇಶದ ಆಲಾಪನೆ ಮುಖ್ಯ
ಸ್ವಾಮಿ ಮೇಲಿನ
ಭಕ್ತಿಯಷ್ಟೇ
ಭೂಮಿ ಮೇಲಿನ
ಪ್ರೇಮಮುಖ್ಯ

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 06 ಪುಟಗಳು: 04 ಬೆಲೆ: 02 ರೂ. ದಿನಾಂಕ: 21-06-2026 ಭಾನುವಾರ | 73536 56555


## ಯಳವತ್ತಿಯಲ್ಲಿ ಜೂನ್ 23ರಂದು ಉಚಿತ ನೇತ್ರ ತಪಾಸಣಾ ಶಿಬಿರ

ಲಕ್ಷ್ಮೇಶ್ವರ: ತಾಲೂಕು ಯಳವತ್ತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜೂನ್ 23ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉಚಿತ ನೇತ್ರ ತಪಾಸಣಾ ಹಾಗೂ ಶಸ್ತ್ರಚಿಕಿತ್ಸಾ ಆಯ್ಕೆ ಶಿಬಿರ ನಡೆಯಲಿದೆ.

ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಬಿಸಿ ಟ್ರಸ್ಟ್, ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅನೇಕ ಹಿರಿಯ ವೈದ್ಯರು ಹಾಗೂ ಗ್ರಾಮದ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಶಿಬಿರ ಆಯೋಜಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ಹಾಗೂ ಲೆನ್ಸ್ ಅಳವಡಿಕೆ ಸೌಲಭ್ಯ ಕಲ್ಪಿಸಲಾಗುತ್ತದೆ. ಭಾಗವಹಿಸುವವರು ಎರಡು ಭಾವಚಿತ್ರಗಳು, ರೇಷನ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ತರಬೇಕೆಂದು ಆಯೋಜಕರು ತಿಳಿಸಿದ್ದಾರೆ.

## ಬ್ರೈಟ್ ಬಿಗಿನಿಂಗ್ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ

ಗಜೇಂದ್ರಗಡ: ನಗರದ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು ಕಾರ್ಯಕ್ರಮವನ್ನು ಸಂಸ್ಥೆ ಅಧ್ಯಕ್ಷ ಸೀತಲ ಓಲೇಕಾರ ಉದ್ಘಾಟಿಸಿ ಮಾತನಾಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಯೋಗ ಅತ್ಯಗತ್ಯವಾಗಿದೆ.





ಯೋಗವು ದೇಹ ಮತ್ತು ಮನಸ್ಸಿನ ಸಮತೋಲನ ಕಾಪಾಡುವುದರ ಜೊತೆಗೆ ಒತ್ತಡ ನಿವಾರಣೆಗೆ ಸಹಕಾರಿಯಾಗಿದೆ. ಶಾಲೆಯ ಪುಟಾಣಿಗಳು ಉತ್ಸಾಹದಿಂದ ಯೋಗ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದಾರೆ. ಯೋಗ ದಿನಾಚರಣೆಯನ್ನು ಇಂದು ಮಾತ್ರ ಆಚರಣೆ ಮಾಡದೆ ಇದರ ಅಂಗವಾಗಿ ಆರೋಗ್ಯ ಜಾಗೃತಿ ಸಂದೇಶಗಳನ್ನು ನೀಡಬೇಕಾಗದೆ. ಯೋಗದಿಂದ ದೈಹಿಕ ಕ್ಷಮತೆ ಹೆಚ್ಚುವುದರ ಜೊತೆಗೆ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ ಎಂದರು. ಸಂಸ್ಥೆಯ ಕಾರ್ಯದರ್ಶಿ ನಾಜೀಯಾ ಮುದಗಲ್ ಮಾತನಾಡಿದರು. ಬಳಿಕ ಯೋಗ ತರಬೇತುದಾರ ಕಿರಣ ನಿಡಗುಂದಿ ಅವರು ಮಕ್ಕಳಿಗೆ ತಾಡಾಸನ, ವೃಕ್ಷಾಸನ, ಭುಜಂಗಾಸನ ಸೇರಿದಂತೆ ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮದ ಅಭ್ಯಾಸ ಮಾಡಿಸಿದರು. ಯೋಗದ ಸರಿಯಾದ ವಿಧಾನ, ಅದರ ಆರೋಗ್ಯಕಾರಿ ಪ್ರಯೋಜನಗಳು ಮತ್ತು ನಿಯಮಿತ ಅಭ್ಯಾಸದ ಮಹತ್ವವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ಈಸಂದರ್ಭದಲ್ಲಿ ಶಿಕ್ಷಕಿಯರಾದ ನಸರೀನ ಮುಧೋಳ, ತವಸೀನಬಾನು ಕರ್ನಾಚಿ, ಕಿರ್ತನಾ ಬಂಡಿಹಾಳ ಸಿಬ್ಬಂದಿಗಳಾದ ಸಂಗಮೇಶ ರೇವಡಿ, ರವಿಚಂದ್ರ ನಿಡಗುಂದಿ, ಶಾಂತಮ್ಮ ಮುದಟಗಿಮಠ, ಶಾಂತಾ ಸೂರೆಬಾನ ಸೇರಿದಂತೆ ಅನೇಕರು ಇದ್ದರು.

## ಅರ್ಜಿ ಆಹ್ವಾನ

ಗದಗ: ಮುಂಡರಗಿ ತಾಲ್ಲೂಕಿನ ಮುಂಡರಗಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ 2026-27 ನೇ ಸಾಲಿನಲ್ಲಿ ಖಾಲಿ ಇರುವ 08 ಅಂಗನವಾಡಿ ಕಾರ್ಯಕರ್ತೆ ಹುದ್ದೆ ಹಾಗೂ 22 ಅಂಗನವಾಡಿ ಸಹಾಯಕಿಯರ ಹುದ್ದೆಗೆ ಗೌರವ ಸೇವೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ ಜುಲೈ 30 ಆಗಿದ್ದು ಅರ್ಜಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಛೇರಿ, ತಾಲೂಕ ಬಾಲ ಭವನ ಕಟ್ಟಡ, ವಲಯ ಅರಣ್ಯಾಧಿಕಾರಿಗಳ ಕಛೇರಿ ಪಕ್ಕದಲ್ಲಿ, ಹಳೆ ಕಲಕೇರಿ ರಸ್ತೆ ಮುಂಡರಗಿ ಇಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮುಂಡರಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮುಂಡರಗಿ ದೂರವಾಣಿ ಸಂಖ್ಯೆ: 08371-200050 ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.


**ಜನಶ್ರೀ ಟೈಮ್ಸ್**

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.


# ನಿಮ್ಮ ಮುಂದಿನ ದಾರಿ ನೋಡಿಕೊಳ್ಳಿ : ಅಡ್ಡ ಮತದಾನ ಮಾಡಿದ ಜೆಡಿಎಸ್ ಶಾಸಕರಿಗೆ ಕುಮಾರಸ್ವಾಮಿ ಸಂದೇಶ



ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಜೆಡಿಎಸ್ ಶಾಸಕರಿಗೆ ನಿಮ್ಮ ಮುಂದಿನ ದಾರಿ ನೋಡಿಕೊಳ್ಳಿ ಎಂಬ ಸಂದೇಶವನ್ನು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ನೀಡಿದ್ದಾರೆ. ಪಕ್ಷದ ಅಧಿಕೃತ ಅಭ್ಯರ್ಥಿಗೆ ಮತ ಚಲಾಯಿಸದೆ ಅಡ್ಡ ಮತದಾನ ಮಾಡಿದ ಜೆಡಿಎಸ್ ಶಾಸಕರ ಬಗ್ಗೆ ತೀವ್ರ ಅಸಮಾಧಾನಗೊಂಡಿರುವ ಅವರು, ಪಕ್ಷದಲ್ಲಿದ್ದುಕೊಂಡು ನಂಬಿಕೆದ್ರೋಹ ಮಾಡಬಾರದು ಎಂದು ಎಚ್ಚರಿಕೆ ನೀಡಿದ್ದಾರೆ.

ಮೇಲ್ಮನೆ ಚುನಾವಣಾ ಫಲಿತಾಂಶದ ನಂತರ ವಿಧಾನಸಭಾ ಸದಸ್ಯರು ಹಾಗೂ ವಿಧಾನಪರಿಷತ್ ಸದಸ್ಯರು ಕುಮಾರಸ್ವಾಮಿಯವರನ್ನು ಭೇಟಿಯಾಗಿ ಅಡ್ಡಮತದಾನ ಮಾಡಿದ ಶಾಸಕರ ವಿರುದ್ಧ ಕಠಿಣ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಆ ಸಂದರ್ಭದಲ್ಲಿ ಕುಮಾರಸ್ವಾಮಿಯವರು ಅಡ್ಡಮತದಾನ ಮಾಡಿರುವ ಶಾಸಕರು ಯಾರು ಎಂಬ ಮಾಹಿತಿ ಇದೆ. ಅವರು ಈಗಲೇ ತಮ್ಮ ಮುಂದಿನ ದಾರಿ ಯಾವುದೆಂದು ಗುರುತಿಸಿಕೊಂಡು ಹೊರಹೋಗುವುದು ಸೂಕ್ತ. ಜೊತೆಯಲ್ಲೇ ಇದ್ದು ದ್ರೋಹ ಬಗೆಯುವವರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಅಂತವರಿಗೆ ಪಕ್ಷದಿಂದ ಟಿಕೆಟ್ ಕೂಡಾ ನೀಡುವುದಿಲ್ಲ ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಪಕ್ಷದ ವಿಪ್ ಅನ್ನು ಉಲ್ಲಂಘಿಸಿ ಆಮಿಷಕ್ಕೆ ಬಲಿಯಾಗಿ ಅಡ್ಡ ಮತದಾನ ಮಾಡಿದ್ದಾರೆ. ಅವರು ಯಾರೆಂಬುದೂ ಗೊತ್ತಿದೆ. ಅವರ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದನ್ನು ಮುಂದೆ ನಿರ್ಧರಿಸುವುದಾಗಿ ಹೇಳಿದ್ದಾರೆ. ಶಾಸಕರೆಲ್ಲರೂ ಅಡ್ಡಮತದಾನ ಮಾಡಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದವರಿಗೆ ಯಾವುದೇ ರೀತಿ ಕ್ಷಮೆ ಇರಬಾರದು. ಕ್ರಮ ಕೈಗೊಳ್ಳಲೇಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ ಅಂತವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಅಧಿಕಾರವನ್ನು ಕುಮಾರಸ್ವಾಮಿಯವರಿಗೆ ನೀಡಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಆದರೆ ಅಡ್ಡ ಮತದಾನ ಮಾಡಿರುವ ಶಾಸಕರ ಹೆಸರನ್ನು ಮಾತ್ರ ಬಹಿರಂಗಗೊಳಿಸಲಿಲ್ಲ. ಮುಂದೆ ತನ್ನಿಂದ ತಾನಾಗಿಯೇ ಅಂತವರ ಹೆಸರುಗಳು ಬಹಿರಂಗಗೊಳ್ಳುತ್ತವೆ. ಅವರಿಗೆ ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಆಯಾ ಕ್ಷೇತ್ರದ ಜನರು ತಕ್ಕ ಪಾಠವನ್ನು ಚುನಾವಣಾ ಸಂದರ್ಭದಲ್ಲಿ ಕಲಿಸಲಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

## ಸಾಧಕಿ ರೂಪಾ ಸಂತಿ ಅವರ ಯೋಗಯಾನ ಸ್ಫೂರ್ತಿದಾಯಕ



ಲಕ್ಷ್ಮೇಶ್ವರ: ಭಾರತವಿಂದು ಯೋಗ ಗುರುವಾಗಿ ಪ್ರಖ್ಯಾತಿ ಪಡೆಯುವಲ್ಲಿ ಯೋಗವನ್ನು ಯೋಗ ಸಾಧಕರು ಅತ್ಯಂತ ವೈಜ್ಞಾನಿಕವಾಗಿ ಜಗತ್ತಿಗೆ ತಿಳಿಸಿಕೊಡುವಲ್ಲಿ ಯಶಸ್ವಿಯಾಗಿದ್ದೇ ಕಾರಣ. ಯೋಗದ ಮಹತ್ವ, ಅವಶ್ಯಕತೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಯೋಗ ಗುರುಗಳು, ಸಾಧಕರು, ಶಿಕ್ಷಕರು, ತರಬೇತುದಾರರ ಕಾರ್ಯ ಮಹತ್ವದ್ದಾಗಿದೆ.

ಈ ನಿಟ್ಟಿನಲ್ಲಿ ಪಟ್ಟಣದ ಯೋಗ ಸಾಧಕಿ ರೂಪಾ ಸಂತಿ ಅವರು ಕೇವಲ ಯೋಗ ತರಬೇತಿ ಶಿಬಿರ ಮತ್ತು ನಿತ್ಯ ಅಭ್ಯಾಸದಿಂದ ಪ್ರೇರಿತರಾಗಿ ಯೋಗ ಶಿಕ್ಷಣದಲ್ಲಿಯೇ ಸಾಧನೆ ಮಾಡಿದ್ದಾರೆ. ಅವರ ಯೋಗಯಾನ ಇತರರಿಗೂ ಸ್ಫೂರ್ತಿ, ಪ್ರೇರಣೆಯಾಗಿದೆ. 'ಯೋಗದಿಂದ ರೋಗ ದೂರ' ಎಂಬ ಮಾತನ್ನು ತಮ್ಮ ಜೀವನದಲ್ಲೇ ಸಾಕಾರಗೊಳಿಸಿರುವ ಲಕ್ಷ್ಮೇಶ್ವರದ ಯೋಗ ಸಾಧಕಿ ರೂಪಾ ಕಲ್ಮೇಶ್ವರ ಸಂತಿ ಅವರು ಯೋಗಾಭ್ಯಾಸದ ಮೂಲಕ ಆರೋಗ್ಯವನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ಯೊಗ ಶಿಕ್ಷಣದಲ್ಲಿ ರಾಜ್ಯ ಮಟ್ಟದ ಗೌರವವನ್ನು ಪಡೆದಿದ್ದಾರೆ.



ಬಾಲ್ಯದಿಂದಲೇ ಶಿಕ್ಷಣ, ಯೋಗದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ರೂಪಾ ಸಂತಿ ಅವರು ಬಿ.ಎಡ್ ಪದವೀಧರೆ. 2019ರಲ್ಲಿ ಲಕ್ಷ್ಮೇಶ್ವರದಲ್ಲಿನ ಉಚಿತ ಯೋಗ ತರಬೇತಿ ಶಿಬಿರದಿಂದ ತಮ್ಮ ಯೋಗಯಾನ ಆರಂಭಿಸಿದರು. ಯೋಗಾಚಾರ್ಯ ಭವಹರಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ ಆರಂಭವಾದ ಈ ಪಯಣವು ಅವರ ಜೀವನದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ನಿತ್ಯ ಯೋಗಾಭ್ಯಾಸದ ಮೂಲಕ ತಮ್ಮ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಿಕೊಂಡರು. ಬಳಿಕ ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನವನ್ನು ಸಂಪಾದಿಸುವ ಉದ್ದೇಶದಿಂದ ಯೋಗ ಶಿಕ್ಷಣದತ್ತ ಚಿತ್ತ ಹರಿಸಿದರು. ಗುರುಗಳಾದ ಡಾ. ಎಸ್.ಎಸ್. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸರ್ಟಿಫಿಕೇಟ್ ಇನ್ ಯೋಗ ಸೈನ್ಸ್ (ಸಿ.ವೈ.ಎಸ್) ಮತ್ತು ಬ್ಯಾಚ್ಯುಲರ್ ಆಫ್ ನ್ಯಾಚ್ಯರೋಪತಿ ಅಂಡ್ ಯೋಗಿಕ್ ಪದವಿ ನಂತರ ಯೋಗಾಚಾರ್ಯ ಕೆ.ಎಸ್. ಪಲ್ಲೇದ ಅವರ ಮಾರ್ಗದರ್ಶನದಲ್ಲಿ ಯೋಗದಲ್ಲಿ ಪಿ.ಜಿ. ಡಿಪ್ಲೊಮಾ ಪದವಿ ಪಡೆದುಕೊಂಡರು. ಯೋಗದಲ್ಲಿನ ಅವರ ಆಸಕ್ತಿ, ಶಿಸ್ತು, ಪರಿಶ್ರಮ ಮತ್ತು ನಿರಂತರ ಅಭ್ಯಾಸದ ಫಲವಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ 'ಗೋಲ್ಡ್ ಮೆಡಲ್' ಪ್ರಶಸ್ತಿ ಲಭಿಸಿತು. ಪಟ್ಟಣ ಸೇರಿ ಅನೇಕ ಕಡೆ ಉಚಿತ ಯೋಗ ಶಿಕ್ಷಣ, ತರಬೇತಿ ಕೊಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣದ ಸೇವೆಯಲ್ಲಿ ತೊಡಗಿಸಿಕೊಂಡು ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. "ಆಸನಗಳಿಂದ ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ, ಪ್ರಾಣಾಯಾಮದಿಂದ ಉಸಿರಾಟದ ವ್ಯವಸ್ಥೆ ಸುಧಾರಿಸುತ್ತದೆ ಹಾಗೂ ಧ್ಯಾನದಿಂದ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಪ್ರತಿಯೊಬ್ಬರೂ ಯೋಗವನ್ನು ಜೀವನದ ಭಾಗವನ್ನಾಗಿ ಮಾಡಿಕೊಂಡು ತಮ್ಮ ಆರೋಗ್ಯದ ವೈದ್ಯರಾಗಬೇಕು" ಯೋಗವು ಕೇವಲ ವ್ಯಾಯಾಮವಲ್ಲ; ಆರೋಗ್ಯಕರ, ಸಮತೋಲಿತ ಮತ್ತು ಸಂತೋಷದ ಬದುಕಿನ ದಾರಿಯಾಗಿದೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮಾರ್ಗವಾಗಿದೆ. ಯೋಗದಲ್ಲಿನ ಸಾಧನೆಯ ಬಗ್ಗೆ ಗುರುಗಳ ಮಾರ್ಗದರ್ಶನ, ಕುಟುಂಬದವರ ಬೆಂಬಲ ಸ್ಮರಿಸಿದರು. ಯೋಗ ನಮಗೆ ನಾವೇ ಕಂಡುಕೊಳ್ಳುವ ಚಿಕಿತ್ಸೆ ಮತ್ತು ಅರೋಗ್ಯದ ಕಣಜ. ಒತ್ತಡ ಮುಕ್ತ ಮತ್ತು ಶಾಂತಿಯುತ ಬದುಕಿಗಾಗಿ ಯೋಗ ಪ್ರಾಣಾಯಾಮ ಸಾಧನವಾಗಿವೆ. ಯೋಗವು ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ ಅದು ಜಗತ್ತಿನ ಜನರ ಆರೋಗ್ಯಕರ ಜೀವನ ಕ್ರಮವಾಗಿದೆ. ಯೋಗ ಎಲ್ಲ ವಯೋಮಾನದವರ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯಕ್ಕೂ ಮದ್ದಾಗಿದೆ. ಯೋಗ ನಿತ್ಯದ ಬದುಕಿನ ಅಂಗವಾಗಬೇಕು.

## ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಗದಗ: ತಾಲ್ಲೂಕಿನ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ 07 ಹುದ್ದೆ (ಅನುಬಂಧ-1) ಹಾಗೂ ಅಂಗನವಾಡಿ ಸಹಾಯಕಿಯರ 41 ಹುದ್ದೆ (ಅನುಬಂಧ-2)ರ ಗೌರವಸೇವೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 30 ಕೊನೆಯ ದಿನವಾಗಿದೆ.

ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಅರ್ಜಿಯನ್ನು ಭೌತಿಕವಾಗಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಇತರೆ ಯಾವುದೇ ಮೂಲದಿಂದ (ಅಂಚೆ/ಕೋರಿಯರ್) ಸಲ್ಲಿಸಲು ಅವಕಾಶ ಇರುವುದಿಲ್ಲ ಹಾಗೂ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ಕಛೇರಿ ಕೆಲಸದ ವೇಳೆ ದಿನಾಂಕ:30.07.2026 ಸಾಯಂಕಾಲ 05:30 ಗಂಟೆ ಒಳಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ ಅರ್ಜಿ ಸ್ವೀಕೃತ ವಹಿಯಲ್ಲಿ (ರಜಿಸ್ಟರ್) ತಮ್ಮ ಹೆಸರನ್ನು ದಾಖಲಿಸಿ, ತಮ್ಮ ಅರ್ಜಿಯನ್ನು ಸಂಬಂಧಿಸಿದ ಹುದ್ದೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಅಂಗನವಾಡಿ ಕಾರ್ಯಕರ್ತೆ ಅಥವಾ ಅಂಗನವಾಡಿ ಸಹಾಯಕಿ ಹುದ್ದೆಗೆಂದು ಸ್ಪಷ್ಟವಾಗಿ ನಮೂದಿಸಿ ಸಂಬಂಧಿಸಿದ ಬಾಕ್ಸನಲ್ಲಿ ಹಾಕುವುದು. ಹಾಗೂ ನಿಗದಿತ ಅವಧಿ ಮೀರಿ ಬಂದ ಯಾವುದೇ ದಾಖಲಾತಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಆಯ್ಕೆಗೆ ಪರಿಗಣಿಸುವುದಿಲ್ಲ. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಛೇರಿ, ಜಿಲ್ಲಾ ಬಾಲಕರ ಬಾಲ ಮಂದಿರ ಪಾಲಾ ಬದಾಮಿ ರೋಡ ಹಾಕಿ ಗ್ರೌಂಡ್ ಹತ್ತಿರ ಬೆಟಗೇರಿ-ಗದಗ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08372-238823 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು, ಕಛೇರಿಗೆ ಸಂಪರ್ಕಿಸಬಹುದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸಗೊಬ್ಬರದ ಅಂಗಡಿಗಳಿಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ ಪರಿಶೀಲನೆ



ಲಕ್ಷ್ಮೇಶ್ವರ: ಪಟ್ಟಣದಲ್ಲಿನ ರಸಗೊಬ್ಬರ ಅಂಗಡಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಅವರು ಶುಕ್ರವಾರ ದಿಢೀರ್ ಭೇಟಿ ನೀಡಿ ಗೊಬ್ಬರ ದಾಸ್ತಾನು ವಿವರ, ದರಪಟ್ಟಿ, ವಿತರಣೆ ಪದ್ಧತಿ, ಬಿಲ್ ಬುಕ್ ಇತ್ಯಾದಿಗಳ ಮಾಹಿತಿಗಳನ್ನು ಪಡೆದರು.

ಈ ವೇಳೆ ಗೊಬ್ಬರ ನೀಡುವಾಗ ಹಾಳೆಯಲ್ಲಿ ಬಿಲ್ಲು ಬರೆದುಕೊಡುತ್ತಿರಾ ಹೇಗೆ ಎಂದು ಪ್ರಶ್ನಿಸಿದರು, ಅಲ್ಲದೆ ಗೋಡೆಯ ಮೇಲೆ ಬರೆದ ದಾಸ್ತಾನು, ಪುಸ್ತಕದಲ್ಲಿ ಮತ್ತು ಗೋಡಾವನ್‌ಗಳಲ್ಲಿ ಸರಿಯಾಗಿವೆಯೇ ಎಂದು ಕೇಳಿದರು. ಎಲ್ಲವುಗಳಿಗೂ ಅಂಗಡಿಕಾರರು ಸಮರ್ಪಕ ಉತ್ತರ ನೀಡಿದರು.

ಮಳೆಯಾದರೆ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಹೆಚ್ಚುತ್ತದೆ ಅದಕ್ಕೆ ಹೇಗೆ ವ್ಯವಸ್ಥೆ ಮಾಡಿಕೊಂಡಿದ್ದಿರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಅಲ್ಲಲ್ಲಿ ಮಳೆಯಿಲ್ಲದೆ ಇರುವದರಿಂದ ರೈತರು ಬೆಳೆಯನ್ನು ರಕ್ಷಿಸಿಕೊಳ್ಳಲು ಟ್ಯಾಂಕರ್ ಮೂಲಕ ನೀರು ಹಾಯಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ರೈತರು ಹೇಳಿದಾಗ ಇದು ತಾತ್ಕಾಲಿಕ ಪರಿಹಾರವಾಗುತ್ತದೆ ಇದರಿಂದ ನಿರೀಕ್ಷಿತ ಫಸಲು ಬರುವದಿಲ್ಲ, ಮಳೆಯಾದರೆ ಮಾತ್ರ ರೈತರಿಗೆ ಅನೂಕೂಲವಾಗುತ್ತದೆ, ಬರುವ ದಿನಗಳಲ್ಲಿ ಉಂಟಾಗುವ ಪರಿಸ್ಥಿಗನುಗುಣವಾಗಿ ಜಿಲ್ಲಾಡಳಿತ ಸಕಲ ಸಿದ್ದತೆಗಳನ್ನು ಮಾಡಿಕೊಂಡಿದೆ ಎಂದು ಹೇಳಿದರು.

ಮಳೆಯ ಕೊರತೆಯಿಂದ ರೈತರು ರಸಗೊಬ್ಬರಕ್ಕಾಗಿ ಅಂಗಡಿಗಳತ್ತ ಧಾವಿಸಿ ಬರುತ್ತಿಲ್ಲ. ಮರ್‍ನಾಲ್ಕು ದಿನಗಳಲ್ಲಿ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು ಕೃಷಿ ಪರಿಕರ ಮಾರಾಟಗಾರರು ಈ ನಿಟ್ಟಿನಲ್ಲಿ ರೈತರೊಂದಿಗೆ ಸಹಾನುಭೂತಿಯೊಂದಿಗೆ ವರ್ತಿಸಬೇಕು. ರಸಗೊಬ್ಬರ ವಿತರಣೆಯಲ್ಲಿ ಕೃತಕ ಅಭಾವ ಸೃಷ್ಟಿ, ನಿಗದಿತ ದರಕ್ಕಿಂತ ಹೆಚ್ಚುವರಿ ಹಣಕ್ಕೆ ಮಾರಾಟ ಮಾಡುವುದು, ಬಿಳಿ ಹಾಳೆಯಲ್ಲಿ ಬಿಲ್ ಕೊಡುವ ಮಾರಾಟಗಾರರ ವಿರುದ್ಧ ಕ್ರಮ ಜರುಗಿಸಲಾಗುವುದು. ಯೂರಿಯಾ, ಡಿಎಪಿ ಹೊರತು ಪಡಿಸಿ ಎಲ್ಲ ಕಾಂಪ್ಲೇಕ್ಸ್ ರಸಗೊಬ್ಬರ ಲಭ್ಯವಿದೆ ಮತ್ತು ಯೂರಿಯಾ ಗೊಬ್ಬರ ದಾಸ್ತಾನು ಬರಲಿದೆ ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದ ಅವರು ರೈತರೂ ಸಹ ಮಳೆಗಾಲದ ಕೊರತೆಯ ಈ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆ ಮಾಡುವುದು ಸರಿಯಲ್ಲ. ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಹಸಿರು ಗೊಬ್ಬರ ಹಾಗೂ ಜೀವಾಮೃತದಂತಹ' ನೈಸರ್ಗಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ನ್ಯಾನೋ ಗೊಬ್ಬರಗಳ ಬಳಕೆಯಿಂದ ಬೆಳೆಗೆ ಅಗತ್ಯ ಸಾರಜನಕ ಸಮರ್ಪಕವಾಗಿ ಲಭ್ಯವಾಗುವುದರ ಜೊತೆಗೆ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಗಂಗಪ್ಪ ಎಂ,, ಗ್ರೇಡ್-2 ತಹಸೀಲ್ದಾರ ಮಂಜುನಾಥ ಅಮಾಸಿ, ಕಂದಾಯ ಅಧಿಕಾರಿ ಎಂ.ಎ.ನದಾಫ ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಕಾಶಪ್ಪನವರ, ಕೃಷಿ ಅಧಿಕಾರಿ ಚಂದ್ರಶೇಖರಗೌಡ ನರಸಮ್ಮನವರ, ಪಿಎಸ್ಐ ನಾಗರಾಜ ಗಡದ, ಬಸವರಾಜ ಬೆಂಡಿಗೇರಿ, ಅಶೋಕ ಬಟಗುರ್ಕಿ, ಶರಣಪ್ಪ ಗುಳಗಣ್ಣವರ, ದೀಪು ಬಟಗುರ್ಕಿ, ನಾಗರಾಜ ಬಟಗುರ್ಕಿ, ಬಸಣ್ಣ ಕುಂಬಿ, ಶಿವಾನಂದ ಮೆಕ್ಕಿ, ಕೊಟ್ರೇಶ ಕತ್ತಿ, ಸಿದ್ದಣ್ಣ ಕಿವುಡಣ್ಣವರ, ಬಸವರಾಜ ಮೆಣಸಿನಕಾಯಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

## 12 ವರ್ಷಕ್ಕೂ ಹೆಚ್ಚು ಕಾಲ ಅಧಿಕಾರದಲ್ಲಿರುವ ಮೋದಿ ಕಠಿಣ ವ್ಯಕ್ತಿ, ಶ್ರೇಷ್ಠ ನಾಯಕ : ಟ್ರಂಪ್




**ವಾಷಿಂಗ್ಟನ್:** ಭಾರತವನ್ನು ಅಮೆರಿಕ ಅಧ್ಯಕ್ಷ ಟಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ರೇಷ್ಠ ನಾಯಕ ಹಾಗೂ ಕಠಿಣ ವ್ಯಕ್ತಿ ಎಂದು ಹೊಗಳಿದ್ದಾರೆ. ಭಾರತದ ಬೃಹತ್ ದೇಶವನ್ನು 12 ವರ್ಷಗಳಿಗಿಂತ ಹೆಚ್ಚು ಕಾಲ ಅಧಿಕಾರ ನಡೆಸಿ ಶ್ರೇಷ್ಠ ನಾಯಕರೆನಿಸಿದ್ದಾರೆ ಎಂದು ಟ್ರಂಪ್ ಕೊಂಡಾಡಿದ್ದಾರೆ. ಆಕ್ಸಿಯೊಸ್‌ಗೆ ನೀಡಿದ ಸಂದರ್ಶನದಲ್ಲಿ ,ಅಧಿಕಾರ, ಪ್ರಭಾವ ಮತ್ತು ನಿರ್ಧಾರಗಳನ್ನು ಜಾರಿಗೆ ತರುವ ಸಾಮರ್ಥ್ಯದ ದೃಷ್ಟಿಯಿಂದ ತಾನು ಹೆಚ್ಚು ಮೆಚ್ಚುವ ಇಬ್ಬರು ನಾಯಕರಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಮೋದಿ ಸೇರಿದ್ದಾರೆ ಎಂದು ಟ್ರಂಪ್ ಹೇಳಿದರು.

ಮೋದಿ ತುಂಬಾ ಉತ್ತಮ ನಾಯಕ. ಭಾರತವು ಉತ್ತಮ ಆರ್ಥಿಕ ಸಾಧನೆಗಳನ್ನು ದಾಖಲಿಸಿದ ಅವರು ಯುದ್ಧಗಳಿಂದ ದೂರವಿರುತ್ತಾರೆ, ಅದು ಬುದ್ಧಿವಂತಿಕೆಯ ನಡೆ ಎಂದಿದ್ದಾರೆ. ಭಾರತವು 1.5 ಬಿಲಿಯನ್ ಜನಸಂಖ್ಯೆಯ ದೇಶ. ವಾಸ್ತವವಾಗಿ ಅದು ವಿಶ್ವದ ಅತಿ ದೊಡ್ಡ ಜನಸಂಖ್ಯೆಯ ರಾಷ್ಟ್ರವಾಗಿದೆ. ಮೋದಿ ಒಬ್ಬ ಶ್ರೇಷ್ಠ ನಾಯಕ ಎಂದು ಟ್ರಂಪ್ ಹೇಳಿದರು. ಭಾರತದೊಂದಿಗೆ ಅಮೆರಿಕ ಹೆಚ್ಚಿನ ವ್ಯಾಪಾರ ನಡೆಸುತ್ತಿದೆ ಎಂದು ಹೇಳಿದ ಅವರು, ನಾವು ಈಗ ಭಾರತ ಜತೆಗೆ ಸಾಕಷ್ಟು ವ್ಯಾಪಾರ ಮಾಡುತ್ತಿದ್ದೇವೆ. ಆದರೆ ಈಗ ಅದು ನ್ಯಾಯಯುತ ವ್ಯಾಪಾರವಾಗಿದೆ. ಹಿಂದೆ ಅವರು ನಮನ್ನು ಬಹಳವಾಗಿ ಬಳಸಿಕೊಳ್ಳುತ್ತಿದ್ದರು. ಅದಕ್ಕಾಗಿ ನಾನು ಅವರನ್ನು ದೂಷಿಸುವುದಿಲ್ಲ. ಅದಕ್ಕೆ ಅವಕಾಶ ನೀಡಿದ್ದವರು ನಮ್ಮ ಮೂರ್ಖ ರಾಜಕಾರಣಿಗಳು. ಆದರೆ ಈಗ ನಾವು ಸಾಕಷ್ಟು ವ್ಯಾಪಾರ ಮಾಡುತ್ತಿದ್ದೇವೆ ಎಂದು ಟ್ರಂಪ್ ಹೇಳಿದರು. ಈಗಿನ ಪರಿಸ್ಥಿತಿಯಿಂದ ಅವರು ಅಷ್ಟಾಗಿ ಸಂತುಷ್ಟರಿಲ್ಲ, ಏಕೆಂದರೆ ಹಿಂದೆ ಅವರಿಗೆ ಹೆಚ್ಚಿನ ಲಾಭವಾಗುತ್ತಿತ್ತು. ಆದರೂ ಮೋದಿ ಶ್ರೇಷ್ಠ ನಾಯಕ ಎಂದು ಅವರು ಹೇಳಿದರು. ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಸಹ ಟ್ರಂಪ್ ಪ್ರಶಂಸಿಸಿ, ಅವರು ಅಪಾರ ವ್ಯಕ್ತಿತ್ವ ಮತ್ತು ಆತವಿಶ್ವಾಸ ಹೊಂದಿರುವ ನಾಯಕ ಎಂದು ಬಣ್ಣಿಸಿದರು. ಇಬ್ಬರ ಜೀವನದ ಕುರಿತಾಗಿ ಸಿನಿಮಾ ಮಾಡಲು ಹೊರಟರೆ, ಹಾಲಿವುಡ್‌ನಲ್ಲಿ ಅವರಂತ ವ್ಯಕ್ತಿಗಳನ್ನು ಹುಡುಕುವುದು ಕಷ್ಟ ಎಂದು ಟ್ರಂಪ್ ಹೇಳಿದರು. ಮೋದಿ ವಿಭಿನ್ನ ರೀತಿಯಲ್ಲಿ ಅತ್ಯಂತ ಗೌರವಾನ್ವಿತ ನಾಯಕ. ನಿಜವಾದ ಮೋದಿ ಬಹಳ ಕಠಿಣ ವ್ಯಕ್ತಿ ಎಂಬುದು ನನಗೆ ಗೊತ್ತಾಗಿದೆ. ನಾನು ಅವರನ್ನು ಹಿಂದೆ ಅಷ್ಟು ಚೆನ್ನಾಗಿ ತಿಳಿದಿರಲಿಲ್ಲ, ಆದರೆ ಈಗ ತಿಳಿದುಕೊಂಡಿದ್ದೇನೆ ಎಂದು ಅವರು ಹೇಳಿದರು. ಕಳೆದ ವರ್ಷದಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡುವ ಪ್ರಯತ್ನದ ಭಾಗವಾಗಿ, ಟ್ರಂಪ್ ಮತ್ತು ಮೋದಿ ಅವರು ಬುಧವಾರ ಫ್ರಾನ್?ಸನಲ್ಲಿ ನಡೆದ 7 ಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಭಾರತದಲ್ಲಿ ಹಿಂದೆ ಆಗಾಗ ನಾಯಕತ್ವ ಬದಲಾವಣೆ ಆಗುತ್ತಿದ್ದುದನ್ನು ತಾನು ಗಮನಿಸಿದ್ದೇನೆ ಎಂದು ಟ್ರಂಪ್ ಹೇಳಿದರು. ಯಾರೋ ಒಬ್ಬರು ಆರು ತಿಂಗಳು, ಮತ್ತೊಬ್ಬರು ಒಂದು ವರ್ಷ ಅಧಿಕಾರದಲ್ಲಿರುತ್ತಿದ್ದರು. ಆದರೆ ನಂತರ ಮೋದಿ ಪ್ರಧಾನಿಯಾದರು. ಅವರು 12 ವರ್ಷಗಳಿಗಿಂತ ಹೆಚ್ಚು ಕಾಲ ಅಧಿಕಾರದಲ್ಲಿದ್ದು, ಅತ್ಯಂತ ಸ್ಥಿರ ನಾಯಕತ್ವ ನೀಡಿದ್ದಾರೆ. ಅವರಲ್ಲಿ ಅಪಾರ ಶಾಂತ ಸ್ವಭಾವ ಕಾಣುತ್ತದೆ. ಆದರೆ ವಾಸ್ತವವಾಗಿ ಅವರು ತುಂಬಾ ಕಠಿಣ ವ್ಯಕ್ತಿ ಎಂದು ಟ್ರಂಪ್ ಹೇಳಿದರು. ಇದೇ ವೇಳೆ, ಟ್ರಂಪ್ ಅವರು ಪಾಕಿಸ್ತಾನದ ಸೇನಾ ಮುಖ್ಯಸ್ಥ ಹಾಗೂ ಪ್ರಧಾನಿ ಅವರನ್ನೂ ತಾನು ಮೆಚ್ಚುವ ನಾಯಕರ ಪಟ್ಟಿಯಲ್ಲಿ ಉಲ್ಲೇಖಿಸಿದರು.

## ಪೊಲೀಸರ ಮೇಲೆ ದಾಳಿ, ಜಹಾಂಗೀರ್ ಖಾನ್ ಪತ್ನಿ ಬಂಧನ



**ಕೋಲ್ಕತ್ತಾ:** ಪೊಲೀಸರು ಮತ್ತು ಕೇಂದ್ರ ಪಡೆಗಳ ಮೇಲಿನ ದಾಳಿಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಪೊಲೀಸರು ಟಿಎಂಸಿಯ ಫಾಲ್ಟಾ ನಾಯಕ ಜಹಾಂಗೀರ್ ಖಾನ್ ಅವರ ಪತ್ನಿಯನ್ನು ಬಂಧಿಸಿದ್ದಾರೆ. ಫಾಲ್ಟಾ ಪೊಲೀಸ್ ಠಾಣೆಯಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆ ಮತ್ತು ಪೊಲೀಸ್ ಕಸ್ಟಡಿಯಿಂದ ಜಹಾಂಗೀರ್ ಖಾನ್ ಅವರನ್ನು ಮುಕ್ತಗೊಳಿಸಲು ಯತ್ನಿಸಿದ ಎರಡು ದಿನಗಳ ನಂತರ, ಇಂದು ಬೆಳಿಗ್ಗೆ 37 ವರ್ಷದ ಸರೀನಾ ಬೀಬಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ಠಾಣೆಯಲ್ಲಿ ನಡೆದ ಪ್ರತಿಭಟನೆಗೆ ಸಂಬಂಧಿಸಿದಂತೆ ಇದುವರೆಗೆ 27 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಜೂನ್ 8 ರಿಂದ ಬಂಧನದಲ್ಲಿರುವ ತನ್ನ ಪತಿಯನ್ನು ಬಿಡುಗಡೆ ಮಾಡಲು ಸರೀನಾ ಬೀಬಿ ಪೊಲೀಸ್ ಠಾಣೆಯಲ್ಲಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು ಎಂದು ವರದಿಯಾಗಿದೆ. ಭಾರತದಿಂದ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ನೇಪಾಳ ಗಡಿಯಲ್ಲಿ ಅವರನ್ನು ಬಂಧಿಸಲಾಗಿದೆ.ಪ್ರತಿಭಟನೆಗಳು ಮತ್ತು ಪೊಲೀಸರ ಮೇಲಿನ ದಾಳಿಗೆ ಸಂಬಂಧಿಸಿದಂತೆ ಖಾನ್ ಅವರ ಪತ್ನಿಯ ವಿರುದ್ಧ ರಾಜ್ಯ ವಿರೋಧಿ ಚಟುವಟಿಕೆಗಳ ಆರೋಪದ ಮೇಲೆ ಪ್ರಕರಣ ದಾಖಲಿಸಲು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಆದೇಶಿಸಿದ್ದರು. ಇತ್ತೀಚೆಗೆ ಫಾಲ್ಟಾದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಆಸ್ತಿ ಮುಟ್ಟುಗೋಲು ಸೇರಿದಂತೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದರು ಮತ್ತು ಕಾನೂನಿನ ನಿಯಮವನ್ನು ಎತ್ತಿಹಿಡಿಯುವ ಅಗತ್ಯವನ್ನು ಒತ್ತಿ ಹೇಳಿದರು.ಪೊಲೀಸ್ ಮೂಲಗಳ ಪ್ರಕಾರ, ಪೊಲೀಸ್ ಠಾಣೆಯ ಮೇಲಿನ ದಾಳಿಯನ್ನು ಜಹಾಂಗೀರ್ ಅವರ ಪತ್ನಿ ಯೋಜಿಸಿದ್ದರು, ಏಕೆಂದರೆ ಅವರ ಪತಿಯನ್ನು ಸೊಂಟಕ್ಕೆ ಹಗ್ಗ ಕಟ್ಟಿ ಸಾರ್ವಜನಿಕವಾಗಿ ಮೆರವಣಿಗೆ ಮಾಡುತ್ತಿದ್ದ ರೀತಿಗೆ ಅವರು ಕೋಪಗೊಂಡಿದ್ದರು.ಜಹಾಂಗೀರ್ ಖಾನ್ ಅವರನ್ನು ಬಂಧಿಸಿದ ನಂತರ ಪೊಲೀಸರು ಹಲವಾರು ಬಾರಿ ಫಾಲ್ಟಾದ ಬೀದಿಗಳಲ್ಲಿ ಮೆರವಣಿಗೆ ಮಾಡಿದ್ದಾರೆ. ತೃಣಮೂಲ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಸಹಾಯಕರಾದ ಜಹಾಂಗೀರ್ ಖಾನ್, ಬ್ಯಾನರ್ಜಿಯವರ ಲೋಕಸಭಾ ಕ್ಷೇತ್ರವಾದ ಡೈಮಂಡ್ ಹಾರ್ಬರ್ ವ್ಯಾಪ್ತಿಗೆ ಬರುವ ಫಾಲ್ಟಾದಲ್ಲಿ ತಮ್ಮ ಭಯೋತ್ಪಾದನಾ ಆಳ್ವಿಕೆಯನ್ನು ಸ್ಥಾಪಿಸಿದರು.ವಿಧಾನಸಭಾ ಚುನಾವಣೆಯ ಸಮಯದಲ್ಲಿ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಅವರೊಂದಿಗೆ ಸಾರ್ವಜನಿಕವಾಗಿ ಮುಖಾಮುಖಿಯಾದ ನಂತರ ಅವರು ರಾಷ್ಟ್ರೀಯ ಸುದ್ದಿಗಳಲ್ಲಿ ಸ್ಥಾನ ಪಡೆದರು. ವ್ಯಾಪಕ ದುಷ್ಕೃತ್ಯಗಳ ಆರೋಪಗಳ ನಡುವೆ ಎರಡನೇ ಹಂತದ ಮತದಾನದ ಸಮಯದಲ್ಲಿ ಫಾಲ್ಟಾದಲ್ಲಿ ಮತದಾನವನ್ನು ರದ್ದುಪಡಿಸಲಾಯಿತು.

# ನಾಳೆ ನೀಟ್–ಯುಜಿ ಮರುಪರೀಕ್ಷೆ : ರಾಷ್ಟ್ರವ್ಯಾಪಿ ಮಾಕ್ ಡ್ರಿಲ್ ನಡೆಸಿದ ಎನ್ ಟಿಎ




**ನವದೆಹಲಿ:** ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪ್ರವೇಶಾತಿ ಕೋರ್ಸ್‌ಗಳಿಗೆ ನಡೆಯುವ ನೀಟ್–ಯುಜಿ ಮರುಪರೀಕ್ಷೆ ನಾಳೆ ದೇಶದ 551 ನಗರಗಳಲ್ಲಿ ನಡೆಯಲಿದೆ. ಈ ಹಿನ್ನೆಲೆ ಇಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್ ಟಿಎ ) ರಾಷ್ಟ್ರವ್ಯಾಪಿ ಮಾಕ್ ಡ್ರಿಲ್ ನಡೆಸಲಿದೆ. ನೀಟ್ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಸುರಕ್ಷಿತ ಸಾಗಾಟಕ್ಕೆ ಭಾರತೀಯ ವಾಯುಪಡೆ ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ. ಹಿಂದಿನ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದದ ಹಿನ್ನೆಲೆಯಲ್ಲಿ, ಪ್ರಶ್ನೆ ಪತ್ರಿಕೆಗಳು ಪರೀಕ್ಷಾ ಕೇಂದ್ರಗಳನ್ನು ತಲುಪುವವರೆಗಿನ ಸಾಗಾಟದ ಹಂತದಲ್ಲಿ ಯಾವುದೇ ಲೋಪವಾಗದಂತೆ ತಡೆಯಲು ಈ ಕಟ್ಟುನಿಟ್ಟಿನ ಸೇನಾ ಭದ್ರತೆ ಮತ್ತು ವೈಮಾನಿಕ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಪ್ರಶ್ನೆಪತ್ರಿಕೆಯ ವಿತರಣೆ, ಸಂಗ್ರಹಣೆ ಮತ್ತು ಸಾಗಣೆಯ ಪ್ರತಿಯೊಂದು ಹಂತವನ್ನೂ ಇದರಲ್ಲಿ ಪರೀಕ್ಷಿಸಲಾಗುತ್ತಿದೆ. ದೆಹಲಿಯಿಂದ ವಿಮಾನಗಳ ಮೂಲಕ ತಲುಪುವ ಪ್ರಶ್ನೆ ಪತ್ರಿಕೆಗಳನ್ನು, ಅಲ್ಲಿಂದ ದೇಶದ ವಿವಿಧ ಸೂಕ್ಷ್ಮ ಹಾಗೂ ದೂರದ ಪ್ರದೇಶಗಳಾದ ತಮಿಳುನಾಡಿನ ತಿರುನೆಲ್ವೇಲಿ ಮತ್ತು ಮಧ್ಯಪ್ರದೇಶದ ಛಿಂದ್ವಾರಾ ಮುಂತಾದ 18 ಪ್ರಮುಖ ಸ್ಥಳಗಳಿಗೆ ಭಾರತೀಯ ವಾಯುಪಡೆಯ ಮಿ–17 ಹೆಲಿಕಾಪ್ಟರ್‌ಗಳ ಮೂಲಕ ಏರ್‌ಲಿಫ್?ಟ ಮಾಡಲಾಗುತ್ತಿದೆ. ಪರೀಕ್ಷಾ ಸಾಮಗ್ರಿಗಳು ಪರೀಕ್ಷಾ ಕೇಂದ್ರ ತಲುಪುವವರೆಗೂ ಕಟ್ಟುನಿಟ್ಟಾದ ಸೇನಾ ರಕ್ಷಣೆ ಹಾಗೂ ಕಾವಲು ಇರಲಿದೆ. ಭದ್ರತೆಯನ್ನು ಇನ್ನಷ್ಟು ಬಲಪಡಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಮತ್ತು ಕೇಂದ್ರ ಸರ್ಕಾರವು ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕೃತಕ ಬುದ್ಧಿಮತ್ತೆ (AI) ಆಧಾರಿತ ಸಿಸಿಟಿವಿ ಕ್ಯಾಮೆರಾಗಳ ಬಳಕೆ ಮತ್ತು ಪ್ರವೇಶದ್ವಾರಗಳಲ್ಲಿ ಬಯೋಮೆಟ್ರಿಕ್ ಮತ್ತು ಮುಖ ಪರಿಶೀಲನೆ ಕಡ್ಡಾಯಗೊಳಿಸಲಾಗಿದೆ.

ಜಾಮರ್‌ಗಳು: ಮೊಬೈಲ್ ಡೇಟಾ, ಬ್ಲೂಟೂತ್ ಮತ್ತು ವೈ–ಫೈ ಸಿಗ್ನಲ್‌ಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಕೇಂದ್ರಗಳಲ್ಲಿ ಹೈ–ಪವರ್ 5ಜಿ ಜಾಮರ್‌ಗಳನ್ನು ಅಳವಡಿಸಲಾಗಿದೆ. ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಅಧಿಕೃತ ಮಾಹಿತಿ ಮತ್ತು ಪ್ರವೇಶಪತ್ರ ಡೌನ್‌ಲೋಡ್ ಮಾಡಲು ಎನ್‌ಟಿಎ ಅಧಿಕೃತ ವೆಬ್‌ಸೈಟ್ ಅನ್ನು ಪರಿಶೀಲಿಸಬಹುದು. ಪ್ರಶ್ನೆಪತ್ರಿಕೆಗಳ ಸುರಕ್ಷಿತ ಸಾಗಣೆ ಮತ್ತು ಉತ್ತರ ಪತ್ರಿಕೆಗಳ ಭದ್ರತೆಗಾಗಿ ಸುಮಾರು 15,000 ಅರೆಸೇನಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪರೀಕ್ಷೆಯ ಸುಗಮ ನಿರ್ವಹಣೆಗಾಗಿ ಒಟ್ಟಾರೆ ಸುಮಾರು 2.5 ಲಕ್ಷ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ದೇಶಾದ್ಯಂತ ಸುಮಾರು 1.5 ಲಕ್ಷ ಸಿಸಿಟಿವಿ ಕ್ಯಾಮೆರಾಗಳು ಮತ್ತು 15,000 ಸಿಗ್ನಲ್ ಜಾಮರ್‌ಗಳನ್ನು ಅಳವಡಿಸಲಾಗಿದೆ. ಪರೀಕ್ಷೆಯು ಮಧ್ಯಾಹ್ನ 2ರಿಂದ 5:15ರವರೆಗೆ ನಡೆಯಲಿದೆ. ಸುಮಾರು 22.79 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ದೇಶದ 551 ನಗರಗಳು ಮತ್ತು 14 ಅಂತರಾಷ್ಟ್ರೀಯ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ.ಅಭ್ಯರ್ಥಿಗಳಿಗೆ ಯಾವುದೇ ಅನುಮಾನವಿದ್ದರೂ ಅಧಿಕೃತ ವೆಬ್‌ಸೈಟ್ ಮೂಲಕ ಮಾಹಿತಿ ಪಡೆಯಲು ಸೂಚಿಸಲಾಗಿದೆ.

ಆಯಾ ಜಿಲ್ಲಾಡಳಿತ, ರಾಜ್ಯ ಪೊಲೀಸ್ ಪಡೆಗಳು ಮತ್ತು ಕೇಂದ್ರ ಸರ್ಕಾರದ ವಿಶೇಷ ಭದ್ರತಾ ತಂಡ ಒಳಗೊಂಡಂತೆ ಮೂರು ಹಂತದ ಭದ್ರತೆ ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳನ್ನು ಸುರಕ್ಷಿತವಾಗಿರಿಸಲು ಮತ್ತು ಪರೀಕ್ಷೆಯ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳಲು ಸುಮಾರು 2.5 ಲಕ್ಷ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ. ಇದಲ್ಲದೇ ಸುಮಾರು 15,000 ಅರೆಸೇನಾ ಸಿಬ್ಬಂದಿ ಪ್ರಶ್ನೆಪತ್ರಿಕೆಗಳ ಸಾಗಣೆ ಮತ್ತು ಪರೀಕ್ಷೆ ನಂತರ ಉತ್ತರಪತ್ರಿಕೆಗಳನ್ನು ಸುರಕ್ಷಿತವಾಗಿ ಹಿಂದಿರುಗಿಸುವ ಕಾರ್ಯ ಮಾಡಲಿದ್ದಾರೆ.

1.5 ಲಕ್ಷ ಸಿಸಿಟಿವಿ ಕ್ಯಾಮೆರಾ ಅಷ್ಟೇ ಅಲ್ಲದೇ ಕಣ್ಗಾವಲಿಗಾಗಿ 1.5 ಲಕ್ಷ ಸಿಸಿಟಿವಿ ಕ್ಯಾಮೆರಾಗಳು ಮತ್ತು 15,000 ಸಿಗ್ನಲ್ ಜಾಮರ್ಗಳನ್ನ ಅಳವಡಿಸಿದ್ದಾರೆ. ಎನ್‌ಟಿಎ ಕೇಂದ್ರ ಕಚೇರಿ ಮತ್ತು ದೇಶಾದ್ಯಂತ ಸ್ಥಾಪಿಸಲಾದ ಕಂಟ್ರೋಲ್ ರೂಮ್‌ಗಳಿಂದ ನೈಜ ಸಮಯ ಮೇಲ್ವಿಚಾರಣೆ ಮಾಡಲಾಗುತ್ತದೆ. ಅಧಿಕಾರಿಗಳ ಪ್ರಕಾರ, ಸುಮಾರು 22.8 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ, ಇದು ದೇಶದ ಅತಿದೊಡ್ಡ ಪ್ರವೇಶ ಪರೀಕ್ಷೆಗಳಲ್ಲಿ ಒಂದಾಗಿದೆ. 18.5 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಈಗಾಗಲೇ ತಮ ಪ್ರವೇಶ ಪತ್ರಗಳನ್ನ ಡೌನ್‌ಲೋಡ್ ಮಾಡಿಕೊಂಡಿದ್ದಾರೆ, ಆದರೆ ಸುಮಾರು 3.5 ಲಕ್ಷ ವಿದ್ಯಾರ್ಥಿಗಳು ತಮ ಪರೀಕ್ಷಾ ನಗರ ಅಥವಾ ಕೇಂದ್ರವನ್ನು ಬದಲಾಯಿಸಲು ಆಯ್ಕೆ ಮಾಡಿಕೊಂಡಿದ್ದಾರೆ.

ಪರೀಕ್ಷಾ ಕೇಂದ್ರದ ಒಳಗೆ ಪಾರದರ್ಶಕ ನೀರಿನ ಬಾಟಲ್ಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿದೆ. ಇದರಿಂದ ಅಭ್ಯರ್ಥಿಗಳು ಪರೀಕ್ಷೆಯ ಸಮಯದಲ್ಲಿ ನೀರು ಕುಡಿಯಬಹುದು. ಡ್ರೆಸ್ ಕೋಡ್ ಮತ್ತು ಧಾರ್ಮಿಕ ಸಹಿಷ್ಣುತೆ ಅಭ್ಯರ್ಥಿಗಳ ಧರ್ಮ ಮತ್ತು ನಂಬಿಕೆಗೆ ಅನುಗುಣವಾಗಿ ಡ್ರೆಸ್ ಕೋಡ್‌ಗೆ ಅವಕಾಶ ನೀಡಲಾಗಿದೆ. ಹಿಜಾಬ್, ಪಂಜಾಬಿ ರುಮಾಲು ಧರಿಸಲು ಅನುಮತಿ ಇದೆ. ಸಾಮಾನ್ಯ ಚಪ್ಪಲಿ ಮತ್ತು ಕಡಿಮೆ ಹಿಮಡಿ ಎತ್ತರದ ಚಪ್ಪಲಿಗಳನ್ನು ಧರಿಸಬಹುದು. ಆದ–'ರೆ ಎತ್ತರದ ಚಪ್ಪಲಿ ಧರಿಸುವವರು ಹೆಚ್ಚುವರಿ ತಪಾಸಣೆಗೆ ಒಳಗಾಗಬೇಕು. ಪರೀಕ್ಷೆಗೆ ಅಗತ್ಯ ದಾಖಲೆಗಳು : ಎಲ್ಲಾ ಅಭ್ಯರ್ಥಿಗಳು ತಮೊಂದಿಗೆ ಎರಡು ಪಾಸ್‌ಪೋರ್ಟ್ ಸೈಜ್ ಫೋಟೋಗಳನ್ನು ತೆಗೆದುಕೊಂಡು ಹೋಗಬೇಕು. ಸರ್ಕಾರಿ ಫೋಟೋ ಐಡಿ ಕಾರ್ಡ್ (ಆಧಾರ್, ವೋಟರ್ ಐಡಿ, ಪಾಸ್‌ಪೋರ್ಟ್ ಇತ್ಯಾದಿ) ಕಡ್ಡಾಯವಾಗಿ ತರಬೇಕು. ಇವುಗಳಿಲ್ಲದಿದ್ದರೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡುವುದಿಲ್ಲ. ನಿಷೇಧಿತ ವಸ್ತುಗಳು ಯಾವುದು ಪರೀಕ್ಷಾ ಕೇಂದ್ರಗಳಿಗೆ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ಅವುಗಳಲ್ಲಿ ಮೊಬೈಲ್ ಫೋನ್ ಸಾರ್ಟ್ ವಾಚ್ ಬ್ಲೂಟೂತ್ ಉಪಕರಣಗಳು ಇಯರ್ ಫೋನ್‌ಗಳು ದೊಡ್ಡ ಬೆಲ್‌ಟ ಕೊಂಡಿ ಭಾರೀ ಆಭರಣಗಳು

# ಬಿಡದಿ ಟೌನ್‌ಶಿಪ್ ವಿರೋಧಿಸಿ ಇಂದು ಜೆಡಿಎಸ್‌ನಿಂದ ಪಾದಯಾತ್ರೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧಿಸಿ ರೈತರ ಪರ ಸಂಘಟನೆಗಳೊಂದಿಗೆ ನಾಳೆ ಜೆಡಿಎಸ್ ಪಾದಯಾತ್ರೆ ನಡೆಸಲಿದೆ. ಬಿಡದಿ ಬಳಿಯ ಅಂಚಿಪುರ ಗ್ರಾಮದಿಂದ ಹೊಸೂರು ಗ್ರಾಮದವರೆಗೆ ನಾಳೆ ಪಾದಯಾತ್ರೆ ನಡೆಸಲು ಉದ್ದೇಶಿಸಲಾಗಿದೆ. ನಾಳೆ ಬೆಳಗ್ಗೆ 9 ಗಂಟೆಗೆ ಹಂಚಿಪುರದಿಂದ ಆರಂಭವಾಗುವ ಪಾದಯಾತ್ರೆಯು ಅಂಚಿಪುರ ಕಾಲೋನಿ, ಬನ್ನಿಗಿರಿ, ಮೆರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೂ ಪಾದಯಾತ್ರೆ ನಡೆಯಲಿದೆ.

ಹೊಸೂರು ಗ್ರಾಮದಲ್ಲಿ ಬಹಿರಂಗ ಸಭೆ ನಡೆಸಲು ನಿರ್ಧರಿಸಲಾಗಿದೆ. ಉದ್ದೇಶಿತ ಬಿಡದಿ ಟೌನ್‌ಶಿಪ್ ಯೋಜನೆಯನ್ನು ಕೈಬಿಡಬೇಕು. ಈಗಾಗಲೇ ಭೂಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ರದ್ದುಪಡಿಸಬೇಕೆಂದು ಆಗ್ರಹಿಸಲಾಗುತ್ತಿದೆ. ಕಳೆದ 450 ದಿನಗಳಿಗೂ ಹೆಚ್ಚು ಅವಧಿಯಿಂದ ರೈತರು ಟೌನ್‌ಶಿಪ್ ವಿರೋಧಿಸಿ ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ರೈತರ ಪ್ರತಿಭಟನೆಗೆ ಬಿಜೆಪಿ ಮತ್ತು ಜೆಡಿಎಸ್ ಅಲ್ಲದೆ ರೈತಪರ ಸಂಘಟನೆಗಳು ಬೆಂಬಲ ನೀಡಿವೆ.

ಈ ಯೋಜನೆಯಡಿ ಹಲವು ಗ್ರಾಮಗಳ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿದ್ದು, ಈಗಾಗಲೇ ಕೆಲವು ಪ್ರದೇಶಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಕ್ರಮದಿಂದ ರೈತರ ಬದುಕು ಮತ್ತು ಕೃಷಿ ಚಟುವಟಿಕೆಗಳಿಗೆ ಧಕ್ಕೆಯಾಗಲಿದೆ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮತ್ತು ಕೆಲ ರೈತ ಸಂಘಟನೆಗಳ ಮುಖಂಡರು ಆರೋಪಿಸಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆಯ ಹೆಸರಿನಲ್ಲಿ ನಡೆಯುತ್ತಿರುವ 33,562 ಕೋಟಿ ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಿದೆ ಎಂದು ಆರೋಪಿಸಿರುವ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ನಾಳೆ ಈ ಯೋಜನೆಯನ್ನು ವಿರೋಧಿಸಿ ಪಾದಯಾತ್ರೆ ನಡೆಸುವುದಾಗಿ ಪ್ರಕಟಿಸಿದ್ದಾರೆ. ಇದು ಬರೀ ಪಾದಯಾತ್ರೆ ಅಲ್ಲ, ಸ್ವಾಭಿಮಾನದ ಹೋರಾಟ. ನಮ ಭೂಮಿ ನಮಗೆ ಕೇವಲ ಮಣ್ಣಲ್ಲ, ಅದು ನಮ ತಾಯಿ. ರೈತರ ಬೆವರು, ಕಾರ್ಮಿಕರ ರಕ್ತ ಈ ಮಣ್ಣಿನಲ್ಲಿದೆ. ಜೀವ ಬಿಡುತ್ತೇವೆ, ಭೂಮಿ ಬಿಡಲ್ಲ. ಇದು ನಮ ಪ್ರತಿಜ್ಞೆ




ಎಂದು ರೈತರು ಹೇಳುತ್ತಿದ್ದಾರೆ. ಹೀಗಾಗಿ ರೈತರ ಪರ ಹೋರಾಟ ಮಾಡುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಪಾದಯಾತ್ರೆಯಲ್ಲಿ ವಿವಿಧ ರೈತ ಸಂಘಟನೆಗಳ ಮುಖಂಡರು, ರೈತರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ನಮ ನೆಲದ ಮೇಲೆ ನಮ ಅಧಿಕಾರ, ಇದು ನಮ ಜನಸಿದ್ಧ ಹಕ್ಕು. ಭೂಮಿ ಕಬಳಿಕೆ ಬೇಡ, ರೈತರಿಗೆ ನ್ಯಾಯಬೇಕು. ಹೀಗಾಗಿ ನಾಳೆ ರೈತರು ಇಡುವ ಪ್ರತಿಯೊಂದು ಹೆಜ್ಜೆಯೂ ಅನ್ಯಾಯದ ವಿರುದ್ಧದ ಶಕ್ತಿ ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

# ಮೋದಿ ಜತೆ ಯೋಗ ಮಾಡಲು 6 ಲಕ್ಷ ಮಂದಿ ನೋಂದಣಿ

**ನವದೆಹಲಿ:** ದೇಶವೂ 12 ನೇ ಅಂತರರಾಷ್ಟ್ರೀಯ ಯೋಗ ದಿನ (ಐಡಿವೈ) 2026 ಅನ್ನು ಆಚ–ರಿಸಲು ಸಜ್ಜಾಗಿದ್ದು, ಆಯುಷ್ ಸಚಿವಾಲಯದ ಯೋಗ ಸಂಗಮ ಪೋರ್ಟಲ್ ಅಧಿಕೃತ ಹೇಳಿಕೆಯ ಪ್ರಕಾರ, ನೋಂದಣಿಗಳು 6 ಲಕ್ಷವನ್ನು ತಲುಪುವ ಮೂಲಕ ಪ್ರಮುಖ ಮೈಲಿಗಲ್ಲು ಸಾಧಿಸಿದೆ. ಇದು ದೇಶಾದ್ಯಂತದ ಸಂಸ್ಥೆಗಳು ಮತ್ತು ಸಮುದಾಯಗಳಲ್ಲಿ ಅಭೂತಪೂರ್ವ ಉತ್ಸಾಹವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

ಐಡಿವೈ 2026 ರ ಪ್ರಮುಖ ಉಪಕ್ರಮವಾದ ಯೋಗ ಸಂಗಮವು, ಸಾಮಾನ್ಯ ಯೋಗ ಪ್ರೋಟೋಕಾಲ್ (ಸಿವೈಪಿ) ಆದ–'ರಿಸಿ ಸಿಂಕ್ರೊನೈಸ್ ಮಾಡಿದ ಯೋಗ ಅವಧಿಗಳ ಮೂಲಕ ರಾಷ್ಟ್ರದಾದ್ಯಂತ ಸಂಸ್ಥೆಗಳು ಮತ್ತು ಸಮುದಾಯಗಳನ್ನು ಸಂಪರ್ಕಿಸುವ ಗುರಿಯನ್ನು ಹೊಂದಿದೆ. ಒಂದೇ ಸ್ಥಳ ಆಚರಣೆಯನ್ನು ಮೀರಿ, ಈ ಉಪಕ್ರಮವು ಭಾರತದಾದ್ಯಂತದ ಸಂಸ್ಥೆಗಳು ತಮ್ಮದೇ ಆದ ಸ್ಥಳಗಳಲ್ಲಿ ಯೋಗ ಅವಧಿಗಳನ್ನು ನಡೆಸಲು ಅನುವು ಮಾಡಿಕೊಡುತ್ತದೆ ಮತ್ತು ಒಂದು ಸಾಮೂಹಿಕ ರಾಷ್ಟ್ರೀಯ ಚಳವಳಿಯ ಭಾಗವಾಗುತ್ತದೆ. ನೋಂದಾಯಿತ ಸಂಸ್ಥೆಗಳು ಜೂನ್ 21 ರಂದು ರಾಷ್ಟ್ರವ್ಯಾಪಿ ಯೋಗ



ಸಂಗಮ ಆಂದೋಲನಕ್ಕೆ ಸೇರಲು ಮತ್ತು ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಏಕಕಾಲದಲ್ಲಿ ಯೋಗಾಭ್ಯಾಸ ಮಾಡಲು ತಮ್ಮ ಸ್ಥಳಗಳಲ್ಲಿ ಭಾಗವಹಿಸುವವರನ್ನು ಸಜ್ಜುಗೊಳಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ಪೋರ್ಟಲ್‌ನಲ್ಲಿ ನೋಂದಣಿಗಳು ತೀವ್ರ ಏರಿಕೆ ಕಂಡಿವೆ, ಇದು ಐಡಿವೈ 2026 ಆಚರಣೆಯ ಭಾಗವಾಗಲು ಜನರಲ್ಲಿ ಹೆಚ್ಚುತ್ತಿರುವ ಉತ್ಸಾಹವನ್ನು ಸೂಚಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.ದೇಶಾದ್ಯಂತದ ಶಾಲೆಗಳು, ಕಾಲೇಜುಗಳು, ಸರ್ಕಾರಿ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಎನ್‌ಜಿಒಗಳು ಮತ್ತು ಸಮುದಾಯ ಗುಂಪುಗಳು ಪ್ರಧಾನಿ ನೇತೃತ್ವದ ಯೋಗ ಆಚ–'ರಣೆಯಲ್ಲಿ ನೋಂದಾಯಿಸಿಕೊಳ್ಳಲು ಮತ್ತು ಭಾಗವಹಿಸಲು ಮುಂದೆ ಬರುತ್ತಿವೆ ಎಂದು ಅದು ಹೇಳಿದೆ.ಯೋಗ ಸಂಗಮ ಉಪಕ್ರಮವು ಭಾರತದಾದ್ಯಂತ 778 ಜಿಲ್ಲೆಗಳನ್ನು ಒಳಗೊಂಡಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ತಲುಪಿದೆ.ನೋಂದಣಿಗಳಲ್ಲಿ 3.22 ಲಕ್ಷಕ್ಕೂ ಹೆಚ್ಚು ಸರ್ಕಾರಿ ಸಂಸ್ಥೆಗಳು, ಸುಮಾರು 2 ಲಕ್ಷ ಶಿಕ್ಷಣ ಸಂಸ್ಥೆಗಳು, 16,000 ಕ್ಕೂ ಹೆಚ್ಚು ಖಾಸಗಿ ಸಂಸ್ಥೆಗಳು, 5,000 ಕ್ಕೂ ಹೆಚ್ಚು ಎನ್‌ಜಿಒಗಳು ಮತ್ತು ಇತರ ವರ್ಗಗಳಿಂದ ಸುಮಾರು 44,000 ಸಂಸ್ಥೆಗಳು ಸೇರಿವೆ.ರಾಜ್ಯಗಳಲ್ಲಿ, ಪಶ್ಚಿಮ ಬಂಗಾಳವು 2.76 ಲಕ್ಷಕ್ಕೂ ಹೆಚ್ಚು ನೋಂದಣಿಗಳೊಂದಿಗೆ ಅತಿ ಹೆಚ್ಚು ಭಾಗವಹಿಸುವಿಕೆಯನ್ನು ದಾಖಲಿಸಿದೆ, ನಂತರ ರಾಜಸ್ಥಾನವು ಸುಮಾರು 1.50 ಲಕ್ಷ ನೋಂದಣಿಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಉತ್ತರ ಪ್ರದೇಶ, ತಮಿಳುನಾಡು, ಒಡಿಶಾ ಮತ್ತು ಛತ್ತೀಸ್‌ಗಢಗಳು ಗಮನಾರ್ಹ ಭಾಗವಹಿಸುವಿಕೆಯನ್ನು ಹೊಂದಿರುವ ಇತರ ರಾಜ್ಯಗಳಲ್ಲಿ ಸೇರಿವೆ. ಯೋಗ ಸಂಗಮ ಕಾರ್ಯಕ್ರಮಗಳನ್ನು ನೋಂದಾಯಿಸುವ ಮೂಲಕ ಈ ಬೆಳೆಯುತ್ತಿರುವ ಆಂದೋಲನಕ್ಕೆ ಸೇರಲು ಆಯುಷ್ ಸಚಿವಾಲಯವು ಹೆಚ್ಚಿನ ಸಂಸ್ಥೆಗಳು, ಸಂಸ್ಥೆಗಳು ಮತ್ತು ಸಮುದಾಯಗಳನ್ನು ಆಹ್ವಾನಿಸಿದೆ. ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನವನ್ನು ಟಿಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗಟಿ ಎಂಬ ಥೀಮ್‌ನಡಿಯಲ್ಲಿ ಆಚ–ರಿಸಲಾಗುತ್ತಿದೆ, ಇದು ತಲೆಮಾರುಗಳಾದ್ಯಂತ ಆರೋಗ್ಯಕರ, ಹೆಚ್ಚು ಸಕ್ರಿಯ ಮತ್ತು ತೃಪ್ತಿಕರ ಜೀವನವನ್ನು ಉತ್ತೇಜಿಸುವಲ್ಲಿ ಯೋಗದ ಪಾತ್ರವನ್ನು ಎತ್ತಿ ತೋರಿಸುತ್ತದೆ.

# ಕರ್ನಾಟಕ : ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಇಳಿಕೆ

**ಬೆಂಗಳೂರು:** ರಾಜ್ಯದ ವಾಣಿಜ್ಯ ತೆರಿಗೆಗಳ ಸಂಗ್ರಹದಲ್ಲಿ ಇಳಿಕೆಯಾಗಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಏಪ್ರಿಲ್ ತಿಂಗಳಿಗಿಂತ ಮೇ ತಿಂಗಳಿನಲ್ಲಿ ಒಂದೂವರೆ ಸಾವಿರ ಕೋಟಿ ರೂ.ಗೂ ಹೆಚ್ಚು ವಾಣಿಜ್ಯ ತೆರಿಗೆಗಳ ಸಂಗ್ರಹ ಕಡಿಮೆಯಾಗಿದೆ. ವಾಣಿಜ್ಯ ತೆರಿಗೆಗಳ ಇಲಾಖೆಯ ಮಾಹಿತಿ ಪ್ರಕಾರ, ಮೇ ತಿಂಗಳಿನಲ್ಲಿ ಒಟ್ಟು 9,902.58 ಕೋಟಿ ರೂ. ಸಂಗ್ರಹವಾಗಿದೆ. ಏಪ್ರಿಲ್ ತಿಂಗಳಿಗೆ ಹೋಲಿಸಿದರೆ 1526.4 ಕೋಟಿಯಷ್ಟು ವಾಣಿಜ್ಯ ತೆರಿಗೆಗಳ ಸಂಗ್ರಹ ಕಡಿಮೆಯಾಗಿದೆ.

ಏಪ್ರಿಲ್ ತಿಂಗಳಿನಲ್ಲಿ 11,428.98 ಕೋಟಿ ರೂ.ನಷ್ಟು ಸಂಗ್ರಹವಾಗಿತ್ತು. ಮೇ ತಿಂಗಳಿನಲ್ಲಿ 7,228.77 ಕೋಟಿ ರೂ. ಸರಕು ಸೇವಾ ತೆರಿಗೆ, 2537.39 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ ಹಾಗೂ 136.42 ಕೋಟಿ ರೂ. ಸಂಗ್ರಹವಾಗಿದೆ. ಕಳೆದ ಎರಡು ತಿಂಗಳಲ್ಲಿ 4,800.11 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ, 16,176.69 ಕೋಟಿ ರೂ. ಸರಕು ಸೇವಾ ತೆರಿಗೆ ಹಾಗೂ 354.96 ಕೋಟಿ ರೂ. ವೃತ್ತಿ ತೆರಿಗೆ ಸೇರಿದಂತೆ ಒಟ್ಟು 21,331.56 ಕೋಟಿ ರೂ. ಸಂಗ್ರಹವಾಗಿದೆ. 2025 –26ನೇ ಸಾಲಿನಲ್ಲಿ ಒಟ್ಟು 1,10,813.30 ಕೋಟಿ




ರೂ.ನಷ್ಟು ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿತ್ತು. ಇದು 2024–25ನೇ ಸಾಲಿಗಿಂತ ಹೆಚ್ಚಾಗಿತ್ತು. ಪ್ರಸಕ್ತ ಸಾಲಿನಲ್ಲಿ ಕಳೆದ ಆರ್ಥಿಕ ಸಾಲಿಗಿಂತಲೂ ಹೆಚ್ಚಿನ ವಾಣಿಜ್ಯ ತೆರಿಗೆಗಳ ಸಂಗ್ರಹವಾಗುವ ನಿರೀಕ್ಷೆಯಿದೆ.

## ಹೊನ್ನು ಮಣ್ಣು ಸರ್ವಾಧಿಕಾರ ಯುದ್ಧಕ್ಕೆ ಪ್ರೇರಣೆ..

# ಎರಡು ಮಹಾಯುದ್ಧಗಳಿಂದ ಜಗತ್ತು ಇನ್ನೂ ಪಾಠ ಕಲಿತ್ತಿಲ್ಲವೇಕೆ..

ಮಾನವ ಇತಿಹಾಸದಲ್ಲಿ ಅನೇಕ ಯುದ್ಧಗಳು ನಡೆದಿವೆ. ಆದರೆ 20ನೇ ಶತಮಾನದಲ್ಲಿ ನಡೆದ ಎರಡು ಮಹಾಯುದ್ಧಗಳು ಮಾನವಕುಲವನ್ನು ಆಳವಾಗಿ ಕದಡಿದವು. ಈ ಎರಡು ಯುದ್ಧಗಳು ಕೇವಲ ದೇಶಗಳ ನಡುವಿನ ರಾಜಕೀಯ ಸಂಘರ್ಷಗಳಲ್ಲ; ಅವು ಮಾನವ ನಾಗರಿಕತೆಯ ದಿಕ್ಕನ್ನೇ ಬದಲಿಸಿದ ಮಹಾದುರಂತಗಳಾಗಿದ್ದವು. ವಿಶ್ವದ ಹಲವಾರು ರಾಷ್ಟ್ರಗಳು ಸೇರಿಕೊಂಡು ನಡೆಸಿದ ಈ ಯುದ್ಧಗಳು ಕೋಟ್ಯಂತರ ಜನರ ಜೀವಗಳನ್ನು ಕಸಿದುಕೊಂಡವು, ಅನೇಕ ನಗರಗಳನ್ನು ನಾಶಮಾಡಿದವು ಮತ್ತು ಜಗತ್ತಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಿವರ್ತಿಸಿದವು.

ಈ ಮಹಾಯುದ್ಧಗಳ ಬೇರುಗಳನ್ನು ನೋಡಿದರೆ 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆರಂಭದಲ್ಲಿ ಯೂರೋಪಿನಲ್ಲಿ ಬೆಳೆಯುತ್ತಿದ್ದ ರಾಷ್ಟ್ರವಾದ, ಸಾಮ್ರಾಜ್ಯಶಾಹಿ, ಶಸ್ತ್ರಾಸ್ತ್ರ ಪೈಪೋಟಿ ಮತ್ತು ರಾಜಕೀಯ ವೈಮನಸ್ಸುಗಳಲ್ಲೇ ಕಂಡುಬರುತ್ತವೆ. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಯೂರೋಪಿನ ರಾಷ್ಟ್ರಗಳು ಶಕ್ತಿಶಾಲಿಯಾಗಿದ್ದವು. ಈ ಶಕ್ತಿಯೊಂದಿಗೆ ಅವು ವಿಶ್ವದ ವಿವಿಧ ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಲು ತೀವ್ರ ಪೈಪೋಟಿ ನಡೆಸಿದವು. ಇದೇ ಪೈಪೋಟಿ ಮುಂದೆ ರಾಷ್ಟ್ರಗಳ ನಡುವಿನ ವಿರೋಧವನ್ನು ಹೆಚ್ಚಿಸಿ ಯುದ್ಧದ ದಾರಿಗೆ ತಳ್ಳಿತು.

ಮೊದಲ ಜಾಗತಿಕ ಯುದ್ಧ (1914–1918) 20ನೇ ಶತಮಾನದ ಆರಂಭದಲ್ಲಿ ನಡೆದ ಮೊದಲ ಮಹಾಯುದ್ಧ ಮಾನವ ಇತಿಹಾಸದಲ್ಲಿ ಮೊದಲ ಬಾರಿಗೆ ವಿಶ್ವದ ಬಹುತೇಕ ರಾಷ್ಟ್ರಗಳನ್ನು ಒಳಗೊಂಡ ಯುದ್ಧವಾಗಿತ್ತು. ಈ ಯುದ್ಧವು 1914ರಿಂದ 1918ರವರೆಗೆ ನಾಲ್ಕು ವರ್ಷಗಳ ಕಾಲ ನಡೆಯಿತು. ಯೂರೋಪಿನಲ್ಲಿ ಹುಟ್ಟಿದ ಈ ಸಂಘರ್ಷ ಬೇಗನೆ ವಿಶ್ವದ ಹಲವು ದೇಶಗಳನ್ನು ಒಳಗೊಂಡು ಮಹಾಯುದ್ಧವಾಗಿ ಬೆಳೆಯಿತು.

ಈ ಯುದ್ಧದಲ್ಲಿ ಎರಡು ಪ್ರಮುಖ ಗುಂಪುಗಳು ಎದುರುಬಂದವು. ಒಂದು ಕಡೆ ಬ್ರಿಟನ್, ಫ್ರಾನ್ಸ್, ರಷ್ಯಾ ಮತ್ತು ನಂತರ ಅಮೆರಿಕ ಸೇರಿದ್ದ ಮಿತ್ರರಾಷ್ಟ್ರಗಳು ಇದ್ದವು. ಇನ್ನೊಂದು ಕಡೆ ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಟರ್ಕಿ ಸೇರಿದ ಕೇಂದ್ರ ರಾಷ್ಟ್ರಗಳು ಇದ್ದವು. ಈ ಯುದ್ಧದಲ್ಲಿ ಕೋಟ್ಯಂತರ ಜನರು ಪ್ರಾಣ ಕಳೆದುಕೊಂಡರು. ನಗರಗಳು, ಕೈಗಾರಿಕೆಗಳು, ರೈಲುಮಾರ್ಗಗಳು ಮತ್ತು ಕೃಷಿಭೂಮಿಗಳು ಸಂಪೂರ್ಣವಾಗಿ ನಾಶವಾದವು. ಯುದ್ಧವು ಮಾನವಕುಲದ ಮೇಲೆ ಅಪಾರ



ದುಃಖವನ್ನು ತಂದಿತು.

ಮೊದಲ ಜಾಗತಿಕ ಯುದ್ಧದ ಕಾರಣಗಳು

**ಅತಿರಾಷ್ಟ್ರೀಯತೆ (Aggressive Nationalism)**

ಮೊದಲ ಜಾಗತಿಕ ಯುದ್ಧಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದ್ದ ಅತಿರಾಷ್ಟ್ರೀಯತೆ. 19ನೇ ಶತಮಾನದ ಅಂತ್ಯದಲ್ಲಿ ಯೂರೋಪಿನಲ್ಲಿ ರಾಷ್ಟ್ರವಾದದ ಭಾವನೆ ಅತ್ಯಂತ ಬಲವಾಗಿ ಬೆಳೆಯಿತು. ಜನರು ತಮ್ಮ ರಾಷ್ಟ್ರ, ಭಾಷೆ, ಸಂಸ್ಕೃತಿ ಮತ್ತು ಜನಾಂಗದ ಬಗ್ಗೆ ಹೆಮ್ಮೆಪಡುವುದು ಸಹಜವಾದುದು. ಆದರೆ ಈ ಭಾವನೆ ಅತಿಯಾಗಿ ಬೆಳೆಯುತ್ತಿದ್ದಂತೆ ಅದು ಸಂಕುಚಿತ ರಾಷ್ಟ್ರೀಯತೆಯ ರೂಪ ಪಡೆದುಕೊಂಡಿತು.

ಈ ಸಂಕುಚಿತ ರಾಷ್ಟ್ರೀಯತೆ ಇತರ ರಾಷ್ಟ್ರಗಳ ಬಗ್ಗೆ ದ್ವೇಷ ಮತ್ತು ಕೀಳುಭಾವನೆಯನ್ನು ಹುಟ್ಟಿಸಿತು. ಪ್ರತಿಯೊಂದು ರಾಷ್ಟ್ರವೂ ತಾವು ಶ್ರೇಷ್ಠರೆಂದು ಭಾವಿಸಲು ಪ್ರಾರಂಭಿಸಿತು. ಜರ್ಮನಿಯ ದೊರೆ ಕೈಸರ್ ವಿಲಿಯಂ ಎರಡನೇನು "ಜರ್ಮನ್ನರು ಪ್ರಪಂಚದಲ್ಲೇ ಶ್ರೇಷ್ಠ ಜನಾಂಗ" ಎಂದು ಘೋಷಿಸಿದ್ದನು. ಅವನು ಜರ್ಮನ್ ಜನಾಂಗವನ್ನು ಟ್ಯೂಟಾನಿಕ್ ಜನಾಂಗದ ಶ್ರೇಷ್ಠ ಪ್ರತಿನಿಧಿಗಳೆಂದು ಹೇಳುತ್ತಿದ್ದನು. ಜರ್ಮನ್ನರು ಜಗತ್ತನ್ನು ಆಳಲು ಸಮರ್ಥರು ಎಂದು ಅವನು ನಂಬಿದ್ದನು.

ಇಂತಹ ಅಂಧ ರಾಷ್ಟ್ರವಾದವು ಯೂರೋಪಿನ ರಾಷ್ಟ್ರಗಳ ನಡುವೆ ತೀವ್ರ ದ್ವೇಷವನ್ನು ಹುಟ್ಟಿಸಿತು. ಜರ್ಮನಿ ಮತ್ತು ಫ್ರಾನ್ಸ್ ನಡುವೆ, ಆಸ್ಟ್ರಿಯಾ ಮತ್ತು ಬಾಲ್ಕನ್ ಪ್ರದೇಶದ ರಾಷ್ಟ್ರಗಳ ನಡುವೆ ವೈಮನಸ್ಸು ಹೆಚ್ಚಿತು. ಇಂಗ್ಲೆಂಡ್ ಕೂಡ ತನ್ನ ಸಾಮ್ರಾಜ್ಯದ ಶಕ್ತಿಯ ಬಗ್ಗೆ ಹೆಮ್ಮೆಪಟ್ಟು "ಸೂರ್ಯ ಅಸ್ತಮಿಸದ ದೇಶ" ಎಂದು ಘೋಷಿಸಿತು. ಈ ರೀತಿಯ ಅತಿರಾಷ್ಟ್ರೀಯ ಭಾವನೆಗಳು ರಾಷ್ಟ್ರಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿಯನ್ನು ಹೆಚ್ಚಿಸಿತು ಮತ್ತು ಯುದ್ಧಕ್ಕೆ ನೆಲೆ ಸಿದ್ಧಮಾಡಿತು.

**ಸಾಮ್ರಾಜ್ಯಶಾಹಿ (Imperialism)**

ಯೂರೋಪಿನ ರಾಷ್ಟ್ರಗಳು ವಿಶ್ವದ ವಿವಿಧ ಭಾಗಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಲು ಸ್ಪರ್ಧಿಸುತ್ತಿದ್ದವು. ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಇತರ ರಾಷ್ಟ್ರಗಳು ಆಫ್ರಿಕಾ ಮತ್ತು ಏಷ್ಯಾದ ಭಾಗಗಳನ್ನು ಹಿಡಿಯಲು ಪ್ರಯತ್ನಿಸುತ್ತಿದ್ದವು. ಈ ವಸಾಹತು ಪೈಪೋಟಿ ರಾಷ್ಟ್ರಗಳ ನಡುವಿನ ಉದ್ವಿಗ್ನತೆಯನ್ನು ಹೆಚ್ಚಿಸಿತು. ವಿಶೇಷವಾಗಿ ಜರ್ಮನಿ ಹೊಸ ಶಕ್ತಿಯಾಗಿ ಉದಯಿಸುತ್ತಿದ್ದರಿಂದ ಬ್ರಿಟನ್ ಮತ್ತು ಫ್ರಾನ್ಸ್ ಆತಂಕಗೊಂಡವು. ಶಸ್ತ್ರಾಸ್ತ್ರ ಪೈಪೋಟಿ **(Militarism)** 20ನೇ ಶತಮಾನದ ಆರಂಭದಲ್ಲಿ ಯೂರೋಪಿನ ರಾಷ್ಟ್ರಗಳು ತಮ್ಮ ಸೇನೆ ಮತ್ತು ನೌಕಾಪಡೆಯನ್ನು ಬಲಪಡಿಸಲು ಸ್ಪರ್ಧಿಸುತ್ತಿದ್ದವು. ಜರ್ಮನಿ ಮತ್ತು ಬ್ರಿಟನ್ ನಡುವೆ ನೌಕಾಪಡೆಯ ಪೈಪೋಟಿ ತೀವ್ರವಾಗಿತ್ತು.
ರಾಷ್ಟ್ರಗಳು ಯುದ್ಧಕ್ಕೆ ಸದಾ ಸಿದ್ಧವಾಗಿರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಶಾಂತಿಯ ಬದಲು ಯುದ್ಧದ ಮನೋಭಾವವೇ ಬಲವತ್ತಾಯಿತು.

**ಮೈತ್ರಿ ವ್ಯವಸ್ಥೆ (Alliance System)**

ಯೂರೋಪಿನಲ್ಲಿ ಹಲವು ರಾಷ್ಟ್ರಗಳು ಪರಸ್ಪರ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಂಡಿದ್ದವು. ಒಂದು ರಾಷ್ಟ್ರದ ಮೇಲೆ ದಾಳಿ ನಡೆದರೆ ಅದರ ಮಿತ್ರ ರಾಷ್ಟ್ರಗಳು ಸಹ ಯುದ್ಧದಲ್ಲಿ ಭಾಗವಹಿಸಬೇಕಾಗಿತ್ತು. ಈ ಮೈತ್ರಿ ವ್ಯವಸ್ಥೆ ಒಂದು ಸಣ್ಣ ಸಂಘರ್ಷವನ್ನೇ ದೊಡ್ಡ ಯುದ್ಧವಾಗಿಸಲು ಕಾರಣವಾಯಿತು.
ತಕ್ಷಣದ ಕಾರಣ:1914ರಲ್ಲಿ ಆಸ್ಟ್ರಿಯಾದ ಯುವರಾಜ ಫ್ರಾಂಜ್ ಫರ್ಡಿನಾಂಡ್ ಅವರನ್ನು ಸರ್ಬಿಯಾದ ರಾಷ್ಟ್ರವಾದಿ ಹತ್ಯೆ ಮಾಡಿದ ಘಟನೆ ಯುದ್ಧಕ್ಕೆ ತಕ್ಷಣದ ಕಾರಣವಾಯಿತು. ಇದರ ನಂತರ ಮೈತ್ರಿ ರಾಷ್ಟ್ರಗಳು ಪರಸ್ಪರ ಯುದ್ಧಕ್ಕೆ ಇಳಿದು ಮಹಾಯುದ್ಧ ಆರಂಭವಾಯಿತು.

ದ್ವಿತೀಯ ಜಾಗತಿಕ ಯುದ್ಧ (1939–1945) ಮೊದಲ ಮಹಾಯುದ್ಧ ಮುಗಿದ ನಂತರ ಜಗತ್ತು ಶಾಂತಿಯ ನಿರೀಕ್ಷೆಯಲ್ಲಿ ಇತ್ತು. ಆದರೆ ಆ ಶಾಂತಿ ಹೆಚ್ಚು ಕಾಲ ಉಳಿಯಲಿಲ್ಲ. 1939ರಲ್ಲಿ ಮತ್ತೊಮ್ಮೆ ಮಹಾಯುದ್ಧ ಪ್ರಾರಂಭವಾಯಿತು. ಇದು ಮಾನವ ಇತಿಹಾಸದಲ್ಲೇ ಅತ್ಯಂತ ವಿನಾಶಕಾರಿ ಯುದ್ಧವೆಂದು ಪರಿಗಣಿಸಲಾಗಿದೆ. ಈ ಯುದ್ಧವು 1939ರಿಂದ 1945ರವರೆಗೆ ಆರು ವರ್ಷಗಳ ಕಾಲ ನಡೆಯಿತು. ಈ ಯುದ್ಧದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ಸೇರಿ ಇತರ ರಾಷ್ಟ್ರಗಳು ಹೋರಾಡಿದವು. ಮತ್ತೊಂದೆಡೆ ಬ್ರಿಟನ್, ಫ್ರಾನ್ಸ್, ಸೋವಿಯತ್ ಯೂನಿಯನ್ ಮತ್ತು ಅಮೆರಿಕ ಸೇರಿ ಮಿತ್ರ ರಾಷ್ಟ್ರಗಳಾಗಿ ಹೋರಾಡಿದವು.
ಈ ಯುದ್ಧದಲ್ಲಿ ಸುಮಾರು 6 ಕೋಟಿಗೂ ಹೆಚ್ಚು ಜನರು ಪ್ರಾಣ ಕಳೆದುಕೊಂಡರು. ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬ್ ದಾಳಿ ನಡೆದದ್ದು ಈ ಯುದ್ಧದ ಭೀಕರತೆಯನ್ನು ತೋರಿಸುತ್ತದೆ.

ದ್ವಿತೀಯ ಮಹಾಯುದ್ಧದ ಕಾರಣಗಳು ವರ್ಸೈಲ್ ಒಪ್ಪಂದದ ದೋಷಗಳು 1919ರಲ್ಲಿ ನಡೆದ ವರ್ಸೈಲ್ ಒಪ್ಪಂದವು ಜರ್ಮನಿಯ ಮೇಲೆ ಕಠಿಣ ಷರತ್ತುಗಳನ್ನು ಹೇರಿತು. ಜರ್ಮನಿಯನ್ನು ಯುದ್ಧದ ಸಂಪೂರ್ಣ ಹೊಣೆಗಾರನೆಂದು ಘೋಷಿಸಲಾಯಿತು. ಅದರ ಸೇನೆಯನ್ನು ಕಡಿಮೆ ಮಾಡಲಾಯಿತು ಮತ್ತು ಭಾರಿ ಪರಿಹಾರ ಹಣವನ್ನು ಪಾವತಿಸಲು ಒತ್ತಾಯಿಸಲಾಯಿತು. ಈ ಒಪ್ಪಂದವು ಜರ್ಮನಿಯ ಗೌರವ ಮತ್ತು ಆರ್ಥಿಕ ಸ್ಥಿತಿಯನ್ನು ಹಾಳುಮಾಡಿತು. ಇದರಿಂದ ಜರ್ಮನ್ ಜನರಲ್ಲಿ ತೀವ್ರ ಸೇಡುಭಾವನೆ ಹುಟ್ಟಿತು. ಅವರು ಈ ಅವಮಾನಕ್ಕೆ ಪ್ರತೀಕಾರ ತೀರಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಇದೇ ಭಾವನೆ ಮುಂದಿನ ಯುದ್ಧಕ್ಕೆ ಕಾರಣವಾಯಿತು.

ಸರ್ವಾಧಿಕಾರಿಗಳ ಏಳಿಗೆ 1930ರ ದಶಕದಲ್ಲಿ ಹಲವು ದೇಶಗಳಲ್ಲಿ ಸರ್ವಾಧಿಕಾರಿಗಳು ಅಧಿಕಾರಕ್ಕೆ ಬಂದರು. ಜರ್ಮನಿಯಲ್ಲಿ ಹಿಟ್ಲರ್, ಇಟಲಿಯಲ್ಲಿ ಮುಸೋಲಿನಿ, ಜಪಾನಿನಲ್ಲಿ ಟೋಜೋ ಮತ್ತು ಸ್ಪೇನಿನಲ್ಲಿ ಫ್ರಾಂಕೊ ಮುಂತಾದ ನಾಯಕರು ತಮ್ಮ ದೇಶಗಳನ್ನು ಸೈನಿಕ ಶಕ್ತಿಯ ಮೂಲಕ ವಿಸ್ತರಿಸಲು ಪ್ರಯತ್ನಿಸಿದರು. ಈ ನಾಯಕರು ಆಕ್ರಮಣಕಾರಿ ನೀತಿಗಳನ್ನು ಅನುಸರಿಸಿದರು. ಇತರ ರಾಷ್ಟ್ರಗಳನ್ನು ಜಯಿಸಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಅವರು ಮುಂದಾದರು.

ರಾಷ್ಟ್ರಗಳ ಸಂಘದ ದುರ್ಬಲತೆ ಮೊದಲ ಮಹಾಯುದ್ಧದ ನಂತರ ಶಾಂತಿ ಕಾಪಾಡಲು ರಾಷ್ಟ್ರಗಳ ಸಂಘವನ್ನು ಸ್ಥಾಪಿಸಲಾಯಿತು. ಆದರೆ ಅದು ಶಕ್ತಿಶಾಲಿ ರಾಷ್ಟ್ರಗಳನ್ನು ನಿಯಂತ್ರಿಸಲು ವಿಫಲವಾಯಿತು. ಜರ್ಮನಿ, ಇಟಲಿ ಮತ್ತು ಜಪಾನ್ ತಮ್ಮ ಆಕ್ರಮಣ ನೀತಿಗಳನ್ನು ಮುಂದುವರೆಸಿದರೂ ಸಂಘವು ಪರಿಣಾಮಕಾರಿ ಕ್ರಮ ಕೈಗೊಳ್ಳಲಿಲ್ಲ.
ಮಹಾಯುದ್ಧಗಳ ಪರಿಣಾಮ
ಈ ಎರಡು ಮಹಾಯುದ್ಧಗಳು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಿಸಿತು.
ಕೋಟ್ಯಂತರ ಜನರು ಪ್ರಾಣ ಕಳೆದುಕೊಂಡರು
ಅನೇಕ ನಗರಗಳು ಸಂಪೂರ್ಣವಾಗಿ ನಾಶವಾದವು
ಹೊಸ ರಾಷ್ಟ್ರಗಳು ಉದಯಿಸಿದವು
ವಸಾಹತು ವ್ಯವಸ್ಥೆ ಕುಸಿಯತೊಡಗಿತು
ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಹತ್ತರ ಬದಲಾವಣೆಗಳು ನಡೆದವು.ದ್ವಿತೀಯ ಮಹಾಯುದ್ಧದ ನಂತರ ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡಲು ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು.

ಮೊದಲ ಮತ್ತು ಎರಡನೇ ಮಹಾಯುದ್ಧಗಳು ಮಾನವ ಇತಿಹಾಸದಲ್ಲಿ ಅತಿದೊಡ್ಡ ದುರಂತಗಳಾಗಿವೆ. ರಾಷ್ಟ್ರವಾದ, ಸಾಮ್ರಾಜ್ಯಶಾಹಿ, ಶಸ್ತ್ರಾಸ್ತ್ರ ಪೈಪೋಟಿ ಮತ್ತು ರಾಜಕೀಯ ದ್ವೇಷಗಳು ಈ ಯುದ್ಧಗಳಿಗೆ ಕಾರಣವಾಗಿದ್ದವು. ಈ ಯುದ್ಧಗಳು ಮಾನವಕುಲಕ್ಕೆ ಒಂದು ಮಹತ್ತರ ಪಾಠವನ್ನು ನೀಡಿವೆ. ಯುದ್ಧವು ಯಾವುದೇ ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ. ಶಾಂತಿ, ಸಹಕಾರ ಮತ್ತು ಪರಸ್ಪರ ಗೌರವವೇ ಜಗತ್ತಿನ ಅಭಿವೃದ್ಧಿಗೆ ಮಾರ್ಗವಾಗಿದೆ. ಮಾನವ ಇತಿಹಾಸದ ಈ ದುರಂತ ಅಧ್ಯಾಯಗಳು ಭವಿಷ್ಯದಲ್ಲಿ ಯುದ್ಧಗಳನ್ನು ತಪ್ಪಿಸಲು ನಮಗೆ ಎಚ್ಚರಿಕೆಯ ಗಂಟೆಯಾಗಿ ಉಳಿಯುತ್ತವೆ.

ಆರ್.ಶಿವರಾಮ
ಲೇಖಕರು ಸಂಡೂರು
ಮೋ: 9945799819



# ಬದುಕು ಬದಲಿಸುವ ಕರುಣೆಯ ಭಾವ

ನೀವು ಮಾಡುವ ಅತ್ಯಂತ ಚಿಕ್ಕ ಸಹಾಯ ಕೂಡ ಕೆಲವೊಬ್ಬರ ಬದುಕನ್ನು ಸಂಪೂರ್ಣವಾಗಿ ಬದಲಿಸಬಹುದು ಎಂಬುದಕ್ಕೆ ಪುಟ್ಟ ಉದಾಹರಣೆ ಕೆಳಗಿನ ಕಥೆ.

24 ವರ್ಷದ ವಯೋವೃದ್ಧರು ತಮ್ಮ ಹರಿದ ಚಪ್ಪಲಿಗಳನ್ನು ಎಳೆಯುತ್ತಾ ತಮ್ಮ ಶರಟಿನ ಕಾಲರ್ ಬಳಿ ಮಾಸಿಹೋದ ಭಾಗವನ್ನು ತಮ್ಮ ಹಿಂದಿನ ಕೂದಲಿನಿಂದ ಮುಚ್ಚುವಂತೆ ಮಾಡುತ್ತಾ ಕೆಲಸದ ಹುಡುಕಾಟದಲ್ಲಿ ಅಲ್ಲಿಗೆ ಬಂದು ನಿಂತರು. ಅತ್ಯಂತ ಪ್ರಖರವಾದ ಆ ಕಚೇರಿಯ ಬೆಳಕಿನಲ್ಲಿ ಅವರ ಅಸಹಾಯಕತೆ ಕಣ್ಣಿಗೆ ಎದ್ದು ಕಾಣುತ್ತಿತ್ತು.

ನಿಧಾನವಾಗಿ ಅವರು ಅಲ್ಲಿದ್ದ ಹೆಲ್ಪ್ ಡೆಸ್ಕ್ ನ ಬಳಿ ತೆರಳಿ ಅಲ್ಲಿ ಕುಳಿತಿದ್ದ ಯುವತಿಗೆ ಕಳೆದ ವರ್ಷ ತನ್ನ ಪತ್ನಿ ತೀರಿ ಹೋಗಿದ್ದು ಆಕೆಯ ಖಾಯಿಲೆಗೆ ತಮ್ಮ ಉಳಿತಾಯದ ಬಹುಪಾಲು ಹಣ ಖರ್ಚಾಗಿ ಹೋಗಿದ್ದು ಇದೀಗ ತಮ್ಮ ಬಳಿ ಒಂದೇ ಒಂದು ರೂಪಾಯಿಯೂ ಇಲ್ಲ. ಮಕ್ಕಳು ಇಲ್ಲದ ತಮಗೆ ಒಂದು ಕೋಣೆಯ ಪುಟ್ಟ ಮನೆಯಿದ್ದು ಸರ್ಕಾರ ಕೊಡುವ ರೇಷನ್ ನಿಂದ ಬದುಕು ಸಾಗಿಸಬಹುದು ಆದರೆ ಕರೆಂಟ್ ಬಿಲ್ಲು, ದಿನಸಿ ಸಾಮಾನುಗಳು ಔಷಧಿ ಖರ್ಚುಗಳ ವೆಚ್ಚವನ್ನು ಧರಿಸಲು ತಾನು ದುಡಿಯಲೇಬೇಕಾದ ಅನಿವಾರ್ಯತೆ ತಮಗಿದೆ. ಬದುಕಿರುವವರೆಗೂ ಸ್ವಾಭಿಮಾನದಿಂದ ದುಡಿದು ತಿನ್ನಬೇಕು ಎಂಬ ಆಶಯದಿಂದ ತಾವು ಕೆಲಸ ಹುಡುಕಿಕೊಂಡು ಬಂದಿರುವೆ ಎಂದು ಒಂದೇ ಉಸಿರಿನಲ್ಲಿ ಹೇಳಿ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಆರೋಗ್ಯಕರ ದೇಹವನ್ನು ಹೊಂದಿದ್ದ ಆತ ಕೆಲವೇ ದಿನಗಳಲ್ಲಿ ಇಳಿದು ಹೋಗಿರಬಹುದು ಎಂಬುದನ್ನು ಆತನ ಮುಖಲಕ್ಷಣ ಹಾಗೂ ದೇಹದ ಗಾತ್ರದಿಂದ ಅರಿತ ಆಕೆ ಸಹಾನುಭೂತಿಯಿಂದ ಆತನತ್ತ ನೋಡಿದಳು. ಇರುವಷ್ಟು ಕಾಲ ಸ್ವತಂತ್ರವಾಗಿ ದುಡಿದು ತಿನ್ನಬೇಕು ಎಂಬ ಆತನ ಆಶಯ ಆಕೆಯ ಮೆಚ್ಚುಗೆಗೆ ಪಾತ್ರವಾಯಿತು.

ಇದೀಗ ರಾತ್ರಿ ಪಾಳಿಯಲ್ಲಿ ಸಾಮಾನುಗಳನ್ನು ಹೊತ್ತು ಬರುವ ಟ್ರಕ್ ಗಳಿಂದ ಸಾಮಾನುಗಳನ್ನು ಇಳಿಸಿಕೊಳ್ಳುವ ಕೆಲಸ ಖಾಲಿ ಇದ್ದು ತಡ ರಾತ್ರಿಯಿಂದ ಮುಂಜಾನೆಯವರೆಗೆ ಈ ಕೆಲಸವನ್ನು ಮಾಡಲು ಅರ್ಜಿ ಕರೆಯಲಾಗಿತ್ತು.




ತನ್ನ ಬದುಕನ್ನು ಸಾಗಿಸಲು ಈ ಕೆಲಸ ಅನಿವಾರ್ಯವಾಗಿದ್ದು, ಸಿಟಿ ಬಸ್ಸಿಗೆ ಕೊಡಲು ತಮ್ಮಲ್ಲಿ ಹಣವಿಲ್ಲವಾದ ಕಾರಣ ಸುಮಾರು 5 ಕಿ.ಮೀ ದೂರದಿಂದ ತಾನು ನಡೆದುಕೊಂಡು ಬಂದಿರುವುದಾಗಿ ಆತ ಹೇಳಿದರು.

ವೃದ್ಧನ ಅಸಹಾಯಕತೆಯನ್ನು ಕಂಡ ಆಕೆ ಈಗಾಗಲೇ ಕಣ್ಣಲ್ಲಿ ತುಸು ನೀರನ್ನು ತುಂಬಿಕೊಂಡಿದ್ದಳು. ಅಪಾರ ದೈಹಿಕ ಶ್ರಮವನ್ನು ಬಯಸುವ ಆ ಕೆಲಸವನ್ನು ಮಾಡುವುದು ವಯಸ್ಸಾದ ಆತನಿಗೆ ಸಾಧ್ಯವಿಲ್ಲ ಎಂಬ ಕಾರಣಕ್ಕೆ ಆಕೆ ಅತ್ಯಂತ ಮೆಲುವಾಗಿ ಆತನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ ಎಂಬುದನ್ನು ತಿಳಿಸಿ ಹೇಳಿದಳು. ತೀವ್ರ ನಿರಾಶೆಯಿಂದ ಹಿಂದಕ್ಕೆ ಒರಗಿ ಕುಳಿತ ವೃದ್ಧ ವ್ಯಕ್ತಿ ಮುಂದಿನ ಒಂದೆರಡು ನಿಮಿಷಗಳಲ್ಲಿ ನಿಧಾನವಾಗಿ ಎದ್ದು ನಿಂತು ಹೊರಗೆ ಹೋಗಲು ಅನುವಾದ. ಆತನ ದಣಿದ ಕಾಲುಗಳಲ್ಲಿ ನಿಶ್ಯಕ್ತಿ, ಮುಖದಲ್ಲಿನ ನಿರಾಶೆಯ ಭಾವ ಕಂಡು ಆಕೆಯ ಮನಸ್ಸಾ ಹಿಂಡಿದಂತಾಯಿತು.

ಕೂಡಲೇ ಆತನನ್ನು ಕೂಗಿ ಕರೆದ ಆಕೆಯ ಧ್ವನಿಯಲ್ಲಿನ ಉತ್ಸಾಹವನ್ನು ನೋಡಿ ಕೊಂಚಮಟ್ಟಿನ ಆಶಾಭಾವದಿಂದ ಮರಳಿ ಬಂದ ಆತನನ್ನು ಕುರಿತು ಆ ಹೆಣ್ಣು ಮಗಳು ನಮ್ಮ ಕಚೇರಿಯ ಮುಖ್ಯ ಭಾಗದಲ್ಲಿರುವ ಹೆಲ್ಪ್ ಡೆಸ್ಕ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ ಒಂದೆರಡು ದಿನಗಳ ಹಿಂದೆ ಕೆಲಸ ಬಿಟ್ಟು ಹೋಗಿದ್ದಾನೆ. ತಮ್ಮ ಸಂಸ್ಥೆಯು ನಂಬಿಕೆಗೆ ಅರ್ಹವಾದ ವ್ಯಕ್ತಿಯ ಹುಡುಕಾಟದಲ್ಲಿದ್ದು ಬರುವ ಫೋನ್ ಕರೆಗಳಿಗೆ ಉತ್ತರಿಸುವ ದಾಖಲೆಗಳನ್ನು ಹೊಂದಿಸಿಡುವ ಹಾಗೂ ಬಂದಿಳಿವ ಹಾಗೂ ಹೊರಗೆ ಕಳುಹಿಸುವ ಮಾಲುಗಳ ಮಾಹಿತಿಯನ್ನು ಬರೆದಿಡುವ ಕೆಲಸಕ್ಕೆ ವ್ಯಕ್ತಿ ಬೇಕಾಗಿದ್ದಾನೆ. ಇದು ಸುಲಭದ ಕೆಲಸವಾಗಿದ್ದು ಒಳಾಂಗಣದಲ್ಲಿ ಕುಳಿತುಕೊಂಡು ಮಾಡಬಹುದಾಗಿದೆ... ಅಲ್ಲದೆ ಈ ಕೆಲಸಕ್ಕೆ ವೇರ್ ಹೌಸ್ ನ ಕೆಲಸಕ್ಕಿಂತ ತುಸು ಸಂಬಳ ಹೆಚ್ಚು.... ನೀವು ಇದನ್ನು ಮಾಡಲು ಒಪ್ಪುವಿರಾದರೆ ಎಂದು ಆಕೆ ಕೇಳುತ್ತಿದ್ದಂತೆಯೇ ನೆಮ್ಮದಿಯ ಮುಖಭಾವದಿಂದ ಮಾಡುತ್ತೇನೆ ಎಂಬಂತೆ ತಲೆಯಾಡಿಸಿದ ವೃದ್ಧ.

ಆ ಹೊತ್ತಿಗೆ ಆಕೆಯ ಶಿಫ್ಟ್ ಮುಗಿದಿದ್ದು ವೃದ್ಧನನ್ನು ತನ್ನೊಂದಿಗೆ ಕರೆದೊಯ್ದು ಅಲ್ಲಿಯೇ ಪಕ್ಕದ ಹೊಟೆಲಿನಲ್ಲಿ ಹೊಟ್ಟೆ ತುಂಬಾ ಊಟ ಮಾಡಿಸಿ ನಂತರ ಚಪ್ಪಲಿ ಅಂಗಡಿಗೆ ಕರೆದೊಯ್ದು ಒಂದು ಜೊತೆ ಮೆದುವಾದ ಆರಾಮದಾಯಕವಾದ ಚಪ್ಪಲಿಯನ್ನು ಕೊಡಿಸಿದಳಲ್ಲದೇ ಚಳಿಯಲ್ಲಿ ನಡುಗುತ್ತಿದ್ದ ಆತನಿಗೆ ಒಂದು ಸ್ವೆಟರ್ ಹಾಗೂ ಛತ್ರಿಯನ್ನು ಕೂಡ ಖರೀದಿಸಿ ಕೊಟ್ಟಳು. ತನ್ನ ಮೊಮ್ಮಗಳ ವಯಸ್ಸಿನ ಪುಟ್ಟ ಯುವತಿಯ ಮೊಗದಲ್ಲಿದ್ದ ದಯಾ ಭಾವವನ್ನು ಕಂಡು ಕೊಂಚ ಭರವಸೆ ಮೂಡಿತು.
ಕೊನೆಗೆ ಓರ್ವ ಪುಟ್ಟ ಯುವತಿಗಾದರೂ ತನ್ನ ಹೀನಾಯ ಪರಿಸ್ಥಿತಿಯ ಅರಿವಾಗಿ ಸಹಾಯ ಹಸ್ತ ಚಾಚಿದಳಲ್ಲ ಎಂದು ವೃದ್ಧನ ಕಣ್ಣು ತುಂಬಿ ಬಂತು.. ಮರುದಿನದಿಂದಲೇ ಆತ ಅಲ್ಲಿ ಕೆಲಸಕ್ಕೆ ಸೇರಿಕೊಂಡು ನಿಷ್ಠೆಯಿಂದ ಕಾರ್ಯನಿರ್ವಹಿಸಲು ಆರಂಭಿಸಿದ.

ಅವಶ್ಯಕತೆ ಇರುವವರಿಗೆ ಸಹಾಯ ಮಾಡುವುದು ಖಂಡಿತವಾಗಿಯೂ ದಾನವಲ್ಲ... ಅವರಿಗೆ ಅವರ ಕಳೆದು ಹೋದ ಗೌರವ ಘನತೆ ಮತ್ತು ಅವಕಾಶಗಳನ್ನು ಮರಳಿ ದೊರಕಿಸಿ ಕೊಡುವುದು. ಅವರ ಕಷ್ಟಗಳನ್ನು ಕೇಳುವವರು ಇನ್ನೂ ಇದ್ದಾರೆ ಎಂಬ ಭರವಸೆಯನ್ನು ಮೂಡಿಸುವುದು ಅವಶ್ಯಕ

ಅತ್ಯಂತ ವೇಗವಾಗಿ ಸಾಗುತ್ತಿರುವ ಈ ಜಗತ್ತಿನಲ್ಲಿ ಮುಂದೆ ಓಡುತ್ತಿರುವ ಸಮಯದಲ್ಲಿ ಇಂತಹದೊಂದು ಜಗತ್ತಿನ ನಿರ್ಮಾಣಕ್ಕೆ ಕಾರಣೀಭೂತರಾದ ಆದರೆ ಇದೀಗ ವಯೋಸಹಜ ತೊಂದರೆಗಳ ಕಾರಣಕ್ಕೆ ನಿರ್ಲಕ್ಷಿಸಲ್ಪಟ್ಟಿರುವ ಜನರನ್ನು ಮರೆಯದೆ... ಅವರಿಗೂ ಒಂದು ಅವಕಾಶವನ್ನು ಕೊಡಬೇಕು... ಆ ಮೂಲಕ ಮಾನವೀಯತೆಯನ್ನು ಮೆರೆಯಬೇಕು. ನಮ್ಮನ್ನು ಈ ಜಗತ್ತು ಮರೆತು ಮುಂದೆ ಸಾಗಿದೆ ಎಂದು ಭಾವಿಸಿ ನೋಯುವ ಜನರಿಗೆ ನಮ್ಮ ಪ್ರೀತಿಯ, ಕರುಣೆಯ ಒಂದು ಎಳೆ ಬದುಕಿನ ಕುರಿತು ಹೊಸ ಭರವಸೆಯನ್ನು ಹುಟ್ಟಿಸುತ್ತದೆ. ಏನಂತೀರಾ ಸ್ನೇಹಿತರೇ?



ವೀಣಾ ಹೇಮಂತ್ ಗೌಡ ಪಾಟೀಲ್

## 2026-27ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆ ನೋಂದಣಿ ಮಾಡಿಸಲು ರೈತ ಬಾಂಧವರಿಗೆ ಸಲಹೆ

ಗದಗ: 2026-27 ರ ಮುಂಗಾರು ಹಂಗಾಮಿಗಾಗಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರೈತರು ಅಧಿಸೂಚಿತ ಬೆಳೆಗಳಿಗೆ ನೋಂದಣಿ ಮಾಡಿಸಲು ಸರಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ಅಧಿಸೂಚಿತ ಬೆಳೆಗೆ ಬೆಳೆಸಾಲ ಪಡೆದರೈತ-ರಿಗೆ ಈ ಯೋಜನೆಯು ಕಡ್ಡಾಯವಾಗಿದ್ದು, ಒಂದು ವೇಳೆ ಬೆಳೆಸಾಲ ಪಡೆದರೈತರು ಸದರಿಯೋಜನೆಯಡಿ ಭಾಗವಹಿಸಲು ಇಚ್ಛೆ ಪಡದೆ ಇದ್ದಲ್ಲಿ, ಈ ಕುರಿತು ಬೆಳೆಸಾಲ ಪಡೆದಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆವಿಮೆ ನೋಂದಣಿ ಅಂತಿಮ ದಿನಾಂಕದಿಂದ 7 (ಏಳು) ದಿನಕ್ಕಿಂತಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುವುದು. ಬೆಳೆಸಾಲ ಪಡೆಯದ ರೈತರಿಗೆ ಬೆಳೆ ವಿಮೆ ಯೋಜನೆಯು ಐಚ್ಛಿಕವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗೆ ಇಂಡಸ್ ಇಂಡ್ ಜನರಲ್ ಇನ್ಸೂರನ್ಸ್ ಕಂಪನಿ ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆಯಾಗಿರುತ್ತದೆ. ಆಸಕ್ತ ರೈತರು ಬೆಳೆ ವಿಮೆ ತುಂಬಲು ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಬೆಳೆ ವಿಮೆ ತುಂಬಲು ಜಂಟಿ ಕೃಷಿ ನಿರ್ದೇಶಕರು ತಿಳಿಸಿರುತ್ತಾರೆ. ಬೆಳೆ ವಿಮೆ ಮಾಡಿಸುವ ರೈತರು ಈಡಿಣುಣ ಈಖಆ ಅನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ರೈತರು ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ ಪುಸ್ತಕ / ಕಂದಾಯ ರಶೀದಿಯನ್ನು ಸಂಬಂಧಿಸಿದ ಬ್ಯಾಂಕ,ಹತ್ತಿರದ ಸಾರ್ವಜನಿಕ ಸೇವಾಕೇಂದ್ರ ( Common Service Centre ), ಗ್ರಾಮ ಒನ್ ಕೇಂದ್ರಗಳಲ್ಲಿ ನೀಡಿ "ಸಂರಕ್ಷಣೆ ಪೋರ್ಟಲ್" ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ / ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ಸಂಬಂಧಿಸಿದ ವಿಮಾ ಸಂಸ್ಥೆಯ ಗದಗ ಶಾಖೆಯನ್ನು ಸಂಪರ್ಕಿಸಲು ತಿಳಿಸಿದೆ. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಭೂಕುಸಿತ, ಬೆಳೆ ಮುಳುಗಡೆ, ಮೇಘಸ್ಫೋಟ, ಗುಡುಗು ಮಿಂಚು ಹಾಗೂ ಬೆಂಕಿ ಅವಗಡಗಳಿಂದ ಉಂಟಾಗುವ ಬೆಳೆ ನಷ್ಟದ ನಿರ್ಧಾರವನ್ನು ವ್ಯಯಕ್ತಿಕವಾಗಿ ನಿರ್ಧರಿಸಿ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥ ಪಡಿಸಲು ಯೋಜನೆಯಡಿ ಅವಕಾಶ ನೀಡಲಾಗಿದೆ. ಇಂತಹ ಸ್ಥಳೀಯ ಗಂಡಾಂತರ ಕಾರಣಗಳಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ನೇರವಾಗಿ ಸಂಬಂಧಪಟ್ಟ ಅನುಷ್ಠಾಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ನೇರವಾಗಿ 72 ಗಂಟೆಗಳೊಳಗಾಗಿ ಲಿಖಿತವಾಗಿ ಅಥವಾ ವಿಮಾ ಸಂಸ್ಥೆಯ ಉಚಿತ ದೂರವಾಣಿ(ಖಿಂಟಟ ಈಡಿಜಜ)ಸಂಖ್ಯೆಗೆ ಕರೆ ಮಾಡಿ ಸೂಚನೆ ನೀಡತಕ್ಕದ್ದು ಹಾಗೂ ಒಂದು ವೇಳೆಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲಿ ಒಣಗಳು ಬಿಟ್ಟಂತಹ ಸಂದರ್ಭದಲ್ಲಿ ಚಂಡಮಾರುತ ಅಥ-ವಾ ಅಕಾಲಿಕ ಮಳೆಯಿಂದ ಬೆಳೆ ನಾಶವಾದರೆ ವ್ಯಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ವಿಮಾ ಪರಿಹಾರವನ್ನುಇತ್ಯರ್ಥಪಡಿಸಲು ಸಹ ಅವಕಾಶ ಕಲ್ಪಿಸಲಾಗಿದೆ.

**ಅರ್ಜಿ ಸಲ್ಲಿಸುವರೈತರಿಗೆ ಸೂಚನೆಗಳು:**

ರೈತರು ತಮ್ಮ ಜಮೀನಿನಲ್ಲಿ ಬಿತ್ತಿದ ಬೆಳೆಯನ್ನು ಮಾತ್ರಅರ್ಜಿಯಲ್ಲಿ ನಮೂದಿಸಬೇಕು. ರೈತರು ಸ್ವತಃ-ತಾವೇಖುದ್ದಾಗಿ ಬೇಟಿ ನೀಡಿಅರ್ಜಿ ಸಲ್ಲಿಸಬೇಕು ಒಂದು ವೇಳೆ ಭೂ ಮಾಲಿಕರಕುಟುಂಬದಇತರೆ ಸದಸ್ಯರು ಬೆಳೆ ವಿಮೆಗೆ ನೋಂದಣಿ ಮಾಡುವದುಇದ್ದಲ್ಲಿ ಭೂ ಮಾಲಿಕ-ರಿಂದ ನಿರಕ್ಷೇಪಣಾ ಪತ್ರ (NOC ) ಮತ್ತು ಮೂಲ (Original ) ಆಧಾರ ಪ್ರತಿಯನ್ನು ಸಲ್ಲಿಸಬೇಕು. ಬಿತ್ತಿದ ಬೆಳೆಯುಮಳೆಆಶ್ರಿತವೋಅಥವಾ ನೀರಾವರಿ ಬೆಳೆಯೋ-ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು. ಬಿತ್ತಿದ ಬೆಳೆಯು 30 ದಿನಗಳದ್ದಾಗಿರಬೇಕು ಹಾಗೂ ಸಧೃಡವಾಗಿರಬೇಕು ಮತ್ತು ಬಿತ್ತನೆ ಮಾಡಿದ ಬೆಳೆಯಕುರಿತು ಸ್ವಯಂಧೃಡೀಕರಣ ನೀಡಬೇಕು. ಬೆಳೆ ಸಮೀಕ್ಷೆಕಡ್ಡಾಯವಾಗಿರುವದರಿಂದ ಬಿತ್ತದೆಇರುವ ಬೆಳೆಯನ್ನು ವಿಮೆ ಮಾಡಿಸಿದಲ್ಲಿ ಬೆಳೆ ವಿಮೆ ಪರಿಹಾರ ಪಡೆಯಲುಅರ್ಹವಾಗುವದಿಲ್ಲ. ಬೆಳೆ ವಿಮಾ ಕಂತು ತುಂಬಲು ಕೊನೆಯ ದಿನಾಂಕಗಳು ಕೆಳಗಿನಂತಿವೆ. ಜುಲೈ 15 – ಹೆಸರು ( ಮಳೆಯಾಶ್ರಿತ) , ಹತ್ತಿ ( ಮಳೆ ಆಶ್ರಿತ & ನೀರಾವರಿ) ಬೆಳೆಗಳಿಗೆ. ಜುಲೈ 31 ? ಗೋವಿನಜೋಳ (ಮ ಆ & ನೀರಾವರಿ), ಸಜ್ಜೆ ( ಮ ಆ), ತೊಗರಿ( ಮ ಆ) , ಶೇಂಗಾ ( ಮ ಆ & ನೀರಾವರಿ) , ಭತ್ತ ( ನೀರಾವರಿ). ಬೆಳೆಗಳಿಗೆ ಅಗಸ್ಟ 14- ಸೂರ್ಯಕಾಂತಿ ( ಮ.ಆ & ನೀರಾವರಿ) ಬೆಳೆಗಳಿಗೆ.

## ಕಾಫಿ ನಾಡಿನಲ್ಲಿ ಕಾಂಗ್ರೆಸ್ ಮುಖಂಡ ಲಾಂಗ್ ಹಿಡಿದು ಓಡಾಟ :ಕೇಸ್ ದಾಖಲು

**ಚಿಕ್ಕಮಗಳೂರು:** ಯುವ ಕಾಂಗ್ರೆಸ್ ಮುಖಂಡನೊಬ್ಬ ಕ್ಷುಲ್ಲಕ ವಿಚಾರಕ್ಕೆ ಕಿರಿಕ್ ಮಾಡಿಕೊಂಡು ಕೈಯಲ್ಲಿ ಲಾಂಗ್ ಹಿಡಿದು ಪುಂಡಾಟ ಮೆರೆದಿರುವ ಘಟನೆ ತಾಲೂಕಿನ ಐದಳ್ಳಿ ಗ್ರಾಮದಲ್ಲಿ ನಡೆದಿದೆ.



ಆಲ್ದೂರು ಯೂತ್ ಕಾಂಗ್ರೆಸ್ ಅಧ್ಯಕ್ಷ ತೇಜಸ್ ಎಂಬಾತ ರಸ್ತೆಯಲ್ಲೇ ಲಾಂಗ್ ಹಿಡಿದು ಪುಂಡಾಟ ಮೆರೆದಿದ್ದಾನೆ. ಗ್ರಾಮದಲ್ಲಿ ಹಬ್ಬ ನಡೆಯುತ್ತಿದ್ದ ಸಂದರ್ಭದಲ್ಲಿ ಈ ಆಘಾತಕಾರಿ ಘಟನೆ ನಡೆದಿದೆ. ಗ್ರಾಮಸ್ಥರೆಲ್ಲರೂ ಹಬ್ಬ ಮುಗಿಸಿಕೊಂಡು ವಾಪಸ್ ಬರುತ್ತಿದ್ದ ವೇಳೆ, ಐದಳ್ಳಿ ಗ್ರಾಮದ ದಯಾನಂದ್ ಎಂಬುವವರು ಬೈಕ್ ನಲ್ಲಿ ತೆರಳುತ್ತಿದ್ದ ವೇಳೆ ಕ್ಷುಲ್ಲಕ ಕಾರಣ-ಕ್ಕಾಗಿ ಕಿರಿಕ್ ತೆಗೆದ ಯೂತ್ ಕಾಂಗ್ರೆಸ್ ಮುಖಂಡ ತೇಜಸ್ ಬೈಕ್‌ಗೆ ಅಡ್ಡಗಟ್ಟಿದ್ದಾನೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿದಾಗ, ತೇಜಸ್ ತಕ್ಷಣವೇ ತನ್ನ ಕಾರಿನಲ್ಲಿದ್ದ ಮಾರಕಾಸ್ತ್ರವನ್ನು ಹೊರ ತೆಗೆದು ದಯಾನಂದ್ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದಾನೆ. ಸಾರ್ವಜನಿಕ ರಸ್ತೆಯಲ್ಲೇ ಲಾಂಗ್ ಹಿಡಿದು ಅಟ್ಟಹಾಸ ಮೆರೆದ ಕಾಂಗ್ರೆಸ್ ಮುಖಂಡನ ಈ ರೌಡಿಸಂಗೆ ಸ್ಥಳೀಯ ಗ್ರಾಮಸ್ಥರು ಸಾಕ್ಷಿಯಾಗಿದ್ದು, ಕೆಲಕಾಲ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕಾರಿನಿಂದ ಲಾಂಗ್ ತೆಗೆದು ವ್ಯಕ್ತಿಯ ಮೇಲೆ ಹಲ್ಲೆಗೆ ಯತ್ನಿಸಿದ ಇಡೀ ದಶ್ಯಾವಳಿಗಳು ಮೊಬೈಲ್ ನಲ್ಲಿ ಸೆರೆಯಾಗಿದ್ದು ಪುಂಡಾಟಿಕೆ ಕೈ ಮುಖಂಡನ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ.

# ಚನ್ನು ಪಾಟೀಲರ ಸಂಸ್ಮರಣೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ

ಗಜೇಂದ್ರಗಡ: ಸಮೀಪದ ಸೂಡಿ ಗ್ರಾಮದ ಶ್ರೀ ಅನ್ನದಾನೇಶ್ವರ ಸಾಂಸ್ಕೃತಿಕ ಭವನದಲ್ಲಿ ಸಹೃದಯಿ ಹಾಗೂ ಸಮಾಜಮುಖಿ ಚಿಂತಕರಾಗಿದ್ದ ಚನ್ನು ಪಾಟೀಲರ ಸಂಸ್ಮರಣೋತ್ಸವ, ಹಿರೇಅಳಗುಂಡಿಂ-ಯ ಚನ್ನು ಪಾಟೀಲ ಫೌಂಡೇಷನ್‌ನ 5ನೇ ವಾರ್ಷಿಕೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವು ಶುಕ್ರವಾರ ನಡೆಯಿತು.

ಕಾರ್ಯಕ್ರಮವನ್ನು ಕೊಪ್ಪಳದ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿ ಉದ್ಘಾಟಿಸಿ ಮಾತನಾಡಿ ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವದಿಂದ ಬದುಕಿದ ಚನ್ನು ಪಾಟೀಲರ ಆದರ್ಶಗಳು ಇಂದಿನ ಯುವಜನತೆಗೆ ಮಾದರಿಯಾಗಿವೆ. ಶಿಕ್ಷಣ ಹಾಗೂ ಸಾಮಾಜಿಕ ಸೇವೆ ಮೂಲಕ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಚನ್ನು ಪಾಟೀಲ ಫೌಂಡೇಷನ್ ಕಳೆದ ಐದು ವರ್ಷಗಳಿಂದ ಶಿಕ್ಷಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿವಿಧ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದನ್ನು



ಅವರು ಶ್ಲಾಘಿಸಿದರು. ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸುವುದು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಇನ್ನಷ್ಟು ಸಾಧನೆಗೆ ಪ್ರೇರಣೆ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ರೋಣದ ಗುಲಗಂಜಿಮಠ ಗುರುಪಾದ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡುತ್ತಾ, ಸಮಾಜದ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಂಸ್ಕಾರಗಳು ಅತ್ಯಂತ ಅವಶ್ಯಕ. ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಂಡು ಯುವಜನರು ಉತ್ತಮ ನಾಗ-ರಿಕರಾಗಿ ಬೆಳೆಯಬೇಕು. ಚನ್ನು ಪಾಟೀಲರಂತಹ ಮಹನೀಯರ ಜೀವನ ಆದರ್ಶಗಳು ಸಮಾಜಕ್ಕೆ ಸದಾ ದಾರಿದೀಪವಾಗಿವೆ ಎಂದು ಹೇಳಿದರು.

ಬಳಿಕ ನಿಡಗುಂದಿಕೊಪ್ಪದ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿ, ಸೇವಾ ಮನೋಭಾವ, ಮಾನವೀಯ ಮೌಲ್ಯಗಳು ಹಾಗೂ ಶಿಕ್ಷಣದ ಮೂಲಕ ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸುವುದು ಅವರ ಸಾಧನೆಗೆ ಮತ್ತಷ್ಟು ಉತ್ತೇಜನ ನೀಡುತ್ತದೆ. ಚನ್ನು ಪಾಟೀಲ ಫೌಂಡೇಷನ್ ಕೈಗೊಂಡಿರುವ ಸಮಾಜಮುಖಿ ಕಾರ್ಯಗಳು ಶ್ಲಾಘನೀಯವಾಗಿದ್ದು, ಇಂತಹ ಕಾರ್ಯಕ್ರಮಗಳು ಯುವ ಪೀಳಿಗೆಗೆ ಪ್ರೇರಣೆಯಾಗುತ್ತವೆ ಎಂದು ನುಡಿದರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಬಳಿಕ ವಿವಿಧ ಗಣ್ಯರು ಚನ್ನು ಪಾಟೀಲರ ವ್ಯಕ್ತಿತ್ವ, ಸಮಾಜ ಸೇವೆ ಹಾಗೂ ಅವರ ಕೊಡುಗೆಗಳನ್ನು ಸ್ಮರಿಸಿದರು. ರೋಣದ ಬೂದಿಶ್ವರ ಮಠದ ಶ್ರೀ ಮ.ನಿ.ಪ್ರ.ಡಾ. ವಿಶ್ವನಾಥ ಮಹಾಸ್ವಾಮಿಗಳು ಆರ್ಶಿವಚನ ನೀಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷೆಯಾದ ಬಸವರಾಜೇಶ್ವರಿ ಪಾಟೀಲ ವಹಿಸಿ ಮಾತನಾಡಿದರು, ಜಿ.ಜಿ. ಪಾಟೀಲ,ಗಂಗಾಧರ ಅಡಗತ್ತಿ, ಮಲ್ಲಿಕಾರ್ಜುನ ಬಾಳಿಕಾಯಿ, ಸಿ.ವಿ. ವಂಕಲಕುಂಟಿ, ಎಸ್. ಎಲ್. ಹಂಚಿನಾಳ, ಸಿ.ಆರ್. ಗುದಗಿ, ರವಿತೇಜ ಅಬ್ಬಿಗೇರಿ, ಕಲ್ಲಿನಾಥಶಾಸ್ತ್ರಿಗಳು ಸಂಗಯ್ಯ ಹಿರೇಮಠ, ಮುತ್ತಣ್ಣ ಪಲ್ಲೇದ, ವೀರಣ್ಣ ಅಂಗಡಿ, ಬಾಬುಗೌಡ ಪಾಟೀಲ, ರಮೇಶ ಕವಲೂರ, ಅರಣ ಕುಲಕರ್ಣಿ, ಎಸ್.ಬಿ.ಕುಂಬಾರ, ಪ್ರಭು ಚವಡಿ, ಶರಣಪ್ಪ ಲಕ್ಕಲಕಟ್ಟಿ, ಮುತ್ತಣ್ಣ ಲಿಂಗನಗೌಡರ, ಉಮೇಶ ಚನ್ನು ಪಾಟೀಲ, ಪೃಥ್ವಿರಾಜ ಚನ್ನು ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಆಸ್ಟ್ರೇಲಿಯಾವನ್ನು 2-0 ಗೋಲುಗಳಿಂದ ಮಣಿಸಿದ ಅಮೆರಿಕ ; ವಿಶ್ವಕಪ್ ನಾಕೌಟ್ ಹಂತಕ್ಕೆ ಪ್ರವೇಶ

**ಸಿಯಾಟಲ್:** ಗಾಯಗೊಂಡಿದ್ದ ಪ್ರಮುಖ ಆಟಗಾರ ಕ್ರಿಶ್ಚಿಯನ್ ಪುಲಿಸಿಕ್ ಅವರ ಅನುಪಸ್ಥಿತಿಯಲ್ಲೂ ಅಮೆರಿಕ ತಂಡವು ಆಸ್ಟ್ರೇಲಿಯಾವನ್ನು 2-0 ಗೋಲುಗಳಿಂದ ಸೋಲಿಸಿ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕ ತಂಡವು ತನ್ನ ಬಲಿಷ್ಠ ಆಟಗಾರರ ಬಳಗದಿಂದ ಕೇವಲ ಎರಡು ಪಂದ್ಯಗಳಲ್ಲೇ ನಾಕೌಟ್ ಹಂತದ ಸ್ಥಾನವನ್ನು ಖಚಿತಪಡಿಸಿಕೊಂಡಿತು.

1994ರಲ್ಲಿ ವಿಶ್ವಕಪ್ ಆತಿಥ-್ಯ ವಹಿಸಿದ್ದಾಗ ಅಮೆರಿಕ ತಂಡವು ಅತ್ಯುತ್ತಮ ಮೂರನೇ ಸ್ಥಾನ ಪಡೆದ ತಂಡಗಳಲ್ಲಿ ಒಂದಾಗಿ ಮುಂದಿನ ಹಂತಕ್ಕೇರಿತ್ತು. ಬಳಿಕ 16ರ ಸುತ್ತಿನಲ್ಲಿ ಚಾಂಪಿಯನ್ ಆಗಿದ್ದ ಬ್ರೆಜಿಲ್ ವಿರುದ್ಧ ಸೋತಿತ್ತು. ಇಟಲಿಯ ಪರ ಆಡುತ್ತಿರುವ ಕ್ರಿಸ್ಟಿಯನ್ ಪುಲಿಸಿಕ್ ಅವರು ಕಾಲಿನ ಸ್ನಾಯು ಗಾಯದ ಕಾರಣ ಈ ಪಂದ್ಯದಿಂದ ಹೊರಗುಳಿದಿದ್ದರು. ಅವರು ಅಮೆರಿಕ ಪರ



87 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 33 ಗೋಲುಗಳನ್ನು ಗಳಿಸಿದ್ದಾರೆ. ಪುಲಿಸಿಕ್ ಅದ್ಭುತ ಆಟಗಾರ. ಅವರು ತಂಡಕ್ಕೆ ಗುಣಮಟ್ಟದ ಆಟ ಮತ್ತು ನಾಯಕತ್ವ ನೀಡುತ್ತಾರೆ. ಆದರೆ ಅವರು ಇಲ್ಲದಿದ್ದರೂ ನಾವು ಉತ್ತಮ ಪ್ರದರ್ಶನ ನೀಡಿ ಫಲಿತಾಂಶ ಸಾಧಿಸಬಲ್ಲೆವು ಎಂಬುದನ್ನು ಇಂದು ತೋರಿಸಿದ್ದೇವೆ ಎಂದು ಹೇಳಿದರು.

21 ವರ್ಷದ ಯುವ ಆಟಗಾರ ಅಲೆಕ್?ಸಫ್ರೀಮನ್ ಪರ 43ನೇ ನಿಮಿಷದಲ್ಲಿ ಅಮೆರಿಕಕ್ಕೆ ಮುನ್ನಡೆ ತಂದುಕೊಟ್ಟರು. ಸೆರ್ಗಿನೊ ಡೆಸ್ಟ್ ಅವರ ಡಿಫ್ಲೆಕ್ಟ್ ಆದ ಶಾಟ್‌ಗೆ ಹೆಡರ್ ಮೂಲಕ ಗೋಲು ಗಳಿಸಿದ ಅವರು ತಮ ವಿಶ್ವಕಪ್ ವೃತ್ತಿಜೀವನದ ಮೊದಲ ಗೋಲು ದಾಖಲಿಸಿದರು. ವಿಡಿಯೊ ಪರಿಶೀಲನೆಯ ಬಳಿಕ ಗೋಲನ್ನು ಮಾನ್ಯಗೊಳಿಸಲಾಯಿತು. ಅಮೆರಿಕ ತಂಡವು 11ನೇ ನಿಮಿಷದಲ್ಲೇ 1-0 ಮುನ್ನಡೆ ಸಾಧಿಸಿತು. ಎಡಭಾಗದಿಂದ ಫೋಲ-ರಿನ್ ಬಾಲೋಗನ್ ನೀಡಿದ ಪಾಸ್‌ನ್ನು ಸ್ಟ್ರೈಕರ್ ಸ್ವೀಕರಿಸುವ ಮುನ್ನವೇ, ಆಸ್ಟ್ರೇಲಿಯಾ ತಂಡದ ರಕ್ಷಣಾ ಆಟಗಾರ ಅವರಿಂದ ಚೆಂಡು ಡಿಫ್ಲೆಕ್ಟ್ ಆಗಿ ಸ್ವಂತ ಗೋಲು ಆಗಿ ಪರಿವರ್ತನೆಯಾಯಿತು. ನಾನು ಯಾವಾಗಲೂ ಅಪಾಯಕಾರಿಯಾಗಿ ಆಡಿ ಅವಕಾಶಗಳನ್ನು ಸೃಷ್ಟಿಸಲು ಬಯಸುತ್ತೇನೆ. ಗೋಲು ನಾನೇ ಗಳಿಸಬೇಕೆಂದಿಲ್ಲ. ನನ್ನ ಪ್ರಯತ್ನದಿಂದ ಎದುರಾಳಿ ತಪ್ಪು ಮಾಡಿ ನಮಗೆ ಮುನ್ನಡೆ ಸಿಕ್ಕರೆ ಅದೂ ನನಗೆ ಗೋಲು ಗಳಿಸಿದಷ್ಟೇ ಸಂತೋಷ. ಪಂದ್ಯದ ಆರಂಭದಲ್ಲೇ ಮುನ್ನಡೆ ಸಿಕ್ಕಿದ್ದು ತಂಡಕ್ಕೆ ಉತ್ತಮ ಆತವಿಶ್ವಾಸ ನೀಡಿತು ಎಂದು ಬಾಲೋಗನ್ ಹೇಳಿದರು. ಈ ಗೆಲುವಿನೊಂದಿಗೆ ಅಮೆರಿಕ ತಂಡವು ವಿಶ್ವಕಪ್‌ನ ನಾಕೌಟ್ ಹಂತದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಪಂದ್ಯವನ್ನುಆಸ್ಟ್ರೇಲಿಯಾ ಹೀನಾಯವಾಗಿ ಸೋತು ನಿರಾಶೆ ಅನುಭವಿಸಿತು.

# ಬೆಂಗಳೂರಿಗೆ ಅಗತ್ಯವಿರುವ 9.56 ಟಿಎಂಸಿ ನೀರು ಕಾಯ್ದಿರಿಸಿ : ಕಾವೇರಿ ನಿಗಮಕ್ಕೆ ಪತ್ರ ಬರೆದ ಜಲಮಂಡಳಿ

**ಬೆಂಗಳೂರು:** ಮುಂಗಾರು ಆರಂಭದಲ್ಲೇ ನಿರೀಕ್ಷಿತ ಮಳೆಯಾಗದ ಹಿನ್ನೆಲೆಯಲ್ಲಿ ರಾಜ್ಯ ರಾಜಧಾನಿ ಬೆಂಗಳೂರಿಗೆ ಮುಂದಿನ ತಿಂಗಳುಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗುವ ಆತಂಕ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚ-ರಿಕೆ ಕ್ರಮವಾಗಿ ಬೆಂಗಳೂರು ಜಲಮಂಡಳಿಯು ಕಾವೇರಿ ನೀರಾವರಿ ನಿಗಮಕ್ಕೆ 9.56 ಟಿಎಂಸಿ ನೀರನ್ನು ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕಾಗಿ ಕಾಯ್ದಿರಿಸುವಂತೆ ಪತ್ರ ಬರೆದು ಮನವಿ ಮಾಡಿದೆ.

ಪ್ರಸ್ತುತ ಸುಮಾರು 1.50 ಕೋಟಿ ಜನಸಂಖ್ಯೆ ಹೊಂದಿರುವ ಬೆಂಗಳೂರಿನಲ್ಲಿ 11.50 ಲಕ್ಷಕ್ಕೂ ಹೆಚ್ಚು ನೀರಿನ ಸಂಪರ್ಕಗಳಿದ್ದು, ಜಲಮಂಡಳಿ ಪ್ರತಿದಿನ 2,225 ಎಂಎಲ್‌ಡಿ ನೀರು ಪೂರೈಸುತ್ತಿದೆ. ಇದರಲ್ಲಿ ಕಾವೇರಿ 5ನೇ ಹಂತದ 775 ಎಂಎಲ್‌ಡಿ ನೀರು ಸಹ ಸೇರಿದೆ. ಆದರೆ, ಈ ಬಾರಿ ಮುಂಗಾರು ಆರಂಭದಲ್ಲೇ ಮಳೆ ಕೊರತೆಯಾಗಿರುವುದು ಹಾಗೂ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿರುವುದು ಅಧಿಕಾ-ರಿಗಳ ಆತಂಕಕ್ಕೆ ಕಾರಣವಾಗಿದೆ. ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸಮರ್ಪಕ ಮಳೆಯಾಗದಿದ್ದರೆ ಸೆಪ್ಟೆಂಬರ್‌ನಿಂದಲೇ ಬೆಂಗಳೂರಿನಲ್ಲಿ ನೀರಿನ ಅಭಾವ ಎದುರಾಗುವ ಸಾಧ್ಯತೆ ಇದೆ ಎಂದು ಜಲಮಂಡಳಿ ಅಂದಾಜಿಸಿದೆ. ಕಳೆದ ವರ್ಷದ ಜೂನ್ 16ರಂದು ಕೆಆರ್‌ಎಸ್ ಜಲಾಶಯದಲ್ಲಿ 22.943 ಟಿಎಂಸಿ ಹಾಗೂ ಕಬಿನಿಯಲ್ಲಿ 5.610 ಟಿಎಂಸಿ ನೀರು ಸಂಗ್ರಹವಿತ್ತು. ಆದರೆ ಈ ವರ್ಷದ ಜೂನ್ 16ಕ್ಕೆ ಕೆಆರ್‌ಎಸ್‌ನಲ್ಲಿ ಕೇವಲ 11.394 ಟಿಎಂಸಿ ಮತ್ತು ಕಬಿನಿಯಲ್ಲಿ 4.923 ಟಿಎಂಸಿ ನೀರು ಮಾತ್ರ ಲಭ್ಯವಿದೆ.

ಈ ಹಿನ್ನೆಲೆ ಬೆಂಗಳೂರಿನ ಕುಡಿಯುವ ನೀರಿನ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಪ್ರಮಾಣದ ನೀರನ್ನು ಕಾಯ್ದಿರಿಸುವಂತೆ




ಜಲಮಂಡಳಿ ಮನವಿ ಮಾಡಿದೆ.ಜಲಮಂಡಳಿ ಅಧಿಕಾರಿಗಳ ಪ್ರಕಾರ, ಮುಂದಿನ ಮೂರು ತಿಂಗಳಲ್ಲಿ ಉತ್ತಮ ಮಳೆಯಾದರೆ ಆತಂಕ ಕಡಿಮೆಯಾಗಲಿದೆ. ಆದರೆ ಮಳೆ ಕೊರತೆ ಮುಂದುವರಿದರೆ ರಾಜಧಾನಿಯಲ್ಲಿ ನೀರಿನ ನಿರ್ವಹಣೆ ದೊಡ್ಡ ಸವಾಲಾಗುವ ಸಾಧ್ಯತೆ ಇದೆ. ಹೀಗಾಗಿ ಈಗಿನಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ.

# ಶಿವಸೇನೆ ಕಾಂಗ್ರೆಸ್‌ನೊಂದಿಗೆ ವಿಲೀನವಾಗಲ್ಲ : ಉದ್ಧವ್

**ಮುಂಬೈ:** ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಯಾವುದೇ ಕಾರಣ-ಕ್ಕೂ ನಮ ಪಕ್ಷ ಕಾಂಗ್ರೆಸ್ ಪಕ್ಷದೊಂದಿಗೆ ವಿಲೀನಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಂಯುಕ್ತ ಸೇನಾ ಯಾವಾಗಲೂ ಹಿಂದುತ್ವ ಮತ್ತು ಮಣ್ಣಿನ ಪುತ್ರರನ್ನು ಬೆಂಬಲಿಸುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.ನಾಲ್ಕು ವರ್ಷಗಳಲ್ಲಿ ಎರಡನೇ ಬಾರಿಗೆ ತಮ್ಮ ಪಕ್ಷದಲ್ಲಿ ಸಂಭವಿಸಲಿರುವ ವಿಭಜನೆಯ ಕುರಿತು ತಮ್ಮ ಮೊದಲ ಹೇಳಿಕೆಯಲ್ಲಿ ಠಾಕ್ರೆ ಅವರು ಶಿವಸೇನೆ ಯಾರೊಂದಿಗೂ ವಿಲೀನಗೊಳ್ಳಲು ಹುಟ್ಟಿಲ್ಲ ಎಂದು ಹೇಳಿದರು.

ಮರಾಠಿ ಜನರ ಹಕ್ಕುಗಳಿಗಾಗಿ ಹೋರಾಡಲು ಮತ್ತು ಹಿಂದುತ್ವವನ್ನು ರಕ್ಷಿಸಲು ಇದನ್ನು ರಚಿಸಲಾಗಿದೆ ಎಂದು ಅವರು ತಮ್ಮ ತಂದೆ ದಿವಂಗತ ಬಾಳಾ ಠಾಕ್ರೆ ಸ್ಥಾಪಿಸಿದ ಸಂಯುಕ್ತ ಶಿವಸೇನೆಯ 60 ನೇ ಸಂಸ್ಥಾಪನಾ ದಿನವನ್ನು ಗುರುತಿಸಿ ಇಲ್ಲಿ ಶಿವಸೇನೆ (ಯುಬಿಟಿ) ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಸೇನೆ (ಯುಬಿಟಿ) ಕಾಂಗ್ರೆಸ್ ಜೊತೆ ವಿಲೀನಗೊಳ್ಳಬಹುದೆಂದು ಅವರು ಭಯಪಡುತ್ತಾರೆ ಎಂಬ ಬಂಡಾಯ ಸಂಸದರ ಹೇಳಿಕೆಗಳನ್ನು ಅವರು ಟೀಕಿಸಿದರು.30 ವರ್ಷಗಳ ಕಾಲ ನಾವು ಬಿಜೆಪಿಯೊಂದಿಗೆ ವಿಲೀನಗೊಳ್ಳದಿದ್ದರೆ, ನಾವು ಕಾಂಗ್ರೆಸ್ ಜೊತೆ ಹೇಗೆ ವಿಲೀನಗೊಳ್ಳ ಬಹುದು. ಮಹಾರಾಷ್ಟ್ರ ಬಿಜೆಪಿ ಶಿಂಧೆ ಸೇನೆಯೊಂದಿಗೆ ವಿಲೀನಗೊಳ್ಳಬಹುದು ಎಂದು ನಾನು



ಭಯಪಡುತ್ತೇನೆ ಎಂದು ಅವರು ಟೀಕಿಸಿದರು. ಕಾಂಗ್ರೆಸ್ ಜೊತೆ ನಮಗೆ ತೀವ್ರ ರಾಜ-ಕೀಯ ಭಿನ್ನಾಭಿಪ್ರಾಯಗಳಿವೆ, ಆದರೆ ಬಿಜೆಪಿ ಮಾಡುತ್ತಿರುವಂತೆ ಶಿವಸೇನೆಯನ್ನು ನಾಶಮಾಡಲು ಅದು ಎಂದಿಗೂ ಪ್ರಯತ್ನಿಸಲಿಲ್ಲ ಎಂದು ಅವರು ಹೇಳಿದರು.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com